ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್   Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 108 RNI Number : KNKAN/25/A2770 27-04-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :108 ರಾಯಚೂರು 27-04-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಹಿಂಸಾಚಾರಕ್ಕೆ ಸ್ಥಾನವಿಲ್ಲ: ಟ್ರಂಪ್ ಮೇಲಿನ ದಾಳಿ ಖಂಡಿಸಿದ ಮೋದಿ

ನವದೆಹಲಿ: ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಪ್ರಮುಖ ಗಣ್ಯರು ಭಾಗವಹಿಸಿದ್ದ ಶ್ವೇತ ಭವನ ವರದಿಗಾರರ ಔತಣಕೂಟದಲ್ಲಿ ಶನಿವಾರ ರಾತ್ರಿ ನಡೆದ ಗುಂಡಿನ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಖಂಡಿಸಿದ್ದಾರೆ.

ಅಮೆರಿಕ ಅಧ್ಯಕ್ಷರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ನಡೆದ ಗುಂಡಿನ ದಾಳಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ, ಘಟನೆಯನ್ನು ಖಂಡಿಸಿದ್ದಾರೆ.

ವಾಷಿಂಗ್ಟನ್ ಡಿಸಿ ಹೋಟೆಲ್‌ನಲ್ಲಿ ನಡೆದ ಭದ್ರತಾ ಲೋಪದ ಬಳಿಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪತ್ನಿ ಮೆಲಾನಿಯಾ ಮತ್ತು ಯುಎಸ್ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಸುರಕ್ಷಿತವಾಗಿದ್ದಾರೆ ಎಂದು ತಿಳಿದು ನಿರಾಳವಾಗಿದ್ದೇನೆ. ಅವರ ಸುರಕ್ಷತೆ ಹಾಗೂ ಆರೋಗ್ಯಕ್ಕಾಗಿ ಹಾರೈಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ. ಮತ್ತು ಹಿಂಸಾಚಾರವನ್ನು ಸ್ಪಷ್ಟವಾಗಿ ಖಂಡಿಸಬೇಕು ಎಂದು ಮೋದಿ ಎಕ್ಸ್ ಪೋಸ್ಟ್ ನಲ್ಲಿ ಬರೆದುಕೊಂಡಿದ್ದಾರೆ.



ಗುಂಡಿನ ದಾಳಿ ಮಾಡಿದ ವ್ಯಕ್ತಿ ಅರೆಸ್ಟ್: ಶನಿವಾರ ರಾತ್ರಿ ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಶ್ವೇತಭವನದ ವರದಿಗಾರರ ವಾರ್ಷಿಕ ಔತಣಕೂಟದ ಸಮಯದಲ್ಲಿ ಕ್ಯಾಲಿಫೋರ್ನಿಯಾದ ಟೊರೆನ್ಸ್ ನ 31 ವರ್ಷದ ಕೋಲ್ ಥಾಮಸ್ ಅಲೆನ್ ಎಂಬಾತ ಏಕಾಏಕಿ ನುಗ್ಗಿ ಗುಂಡಿನ ದಾಳಿ ಮಾಡಿದ್ದ. ಈ ಕಾರ್ಯಕ್ರಮದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅವರ ಪತ್ನಿ ಮೆಲಾನಿಯಾ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆ ತ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಸೇರಿದಂತೆ ಗಣ್ಯ ಪತ್ರಕರ್ತರು ಇಲ್ಲಿ ಉಪಸ್ಥಿತರಿದ್ದರು.

ತಕ್ಷಣವೇ ಟ್ರಂಪ್ ಸೇರಿದಂತೆ ಗಣ್ಯರನ್ನು ಸುರಕ್ಷಿತ ಸ್ಥಳಕ್ಕೆ ಭದ್ರತಾ ಸಿಬ್ಬಂದಿ ರವಾನಿಸಿದ್ದರು. ಇನ್ನು ಭದ್ರತಾ ಪಡೆ ತ್ವರಿತ ಕಾರ್ಯಾಚರಣೆ ನಡೆಸಿ, ಶಂಕಿತ ದಾಳಿಕೋರನನ್ನು ಬಂಧಿಸಿದ್ದರು. ಬಂಧಿತನನ್ನು ಕ್ಯಾಲಿಫೋರ್ನಿಯಾದ ಟೊರೆನ್ಸ್ ನ 31 ವರ್ಷದ ಕೋಲ್ ಥಾಮಸ್ ಅಲೆನ್ ಎಂದು ಗುರುತಿಸಲಾಗಿದೆ. ಈ ಬೆನ್ನಲ್ಲೇ ಟ್ರಂಪ್ ಅವರು ತಮ್ಮ ಟ್ರುತ್ ಸೋಷಿಯಲ್ ಖಾತೆಯಲ್ಲಿ ಬಂದೂಕುಧಾರಿಯ ಚಿತ್ರ ಮತ್ತು ದಾಳಿಯ ವಿಡಿಯೋ ಹಂಚಿಕೊಂಡಿದ್ದರು.

ಗುಂಡಿನ ಶಬ್ದ ಕೇಳಿಬಂದ ಬೆನ್ನಲ್ಲೇ ಹಲವರು ಗಣ್ಯರು ಮತ್ತು ಪತ್ರಕರ್ತರು ಮೇಜಿನ ಕೆಳಗೆ ಕುಳಿತುಕೊಂಡಿರುವುದು ಮತ್ತು ಟ್ರಂಪ್ ಅವರನ್ನು ಭದ್ರತಾ ಪಡೆ ಸುತ್ತುವರೆದು ಕರೆದೊಯ್ಯುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಇನ್ನು ಹೋಟೆಲ್ ನಲ್ಲಿ ಮತ್ತು ಸುತ್ತಮುತ್ತ ಭದ್ರತಾ ಪಡೆ ಸುತ್ತುವರಿದಿದ್ದು, ಪ್ರವೇಶ ನಿರ್ಬಂಧಿಸಲಾಗಿತ್ತು. ಆ ಬಳಿಕ ಪ್ರತಿಕ್ರಿಯೆ ನೀಡಿದ್ದ ಟ್ರಂಪ್, ನಾವು ಸುರಕ್ಷಿತವಾಗಿದ್ದೇವೆ ಎಂದು ತಿಳಿಸಿದ್ದರು.

ಸಂವಿಧಾನದಡಿಯಲ್ಲಿ ಸಮುದಾಯ ಕಟ್ಟುವ ಕೆಲಸವಾಗಲಿ: ಡಾ. ರಝಾಕ್ ಉಸ್ತಾದ್ ಕರೆ

ಸಿರವಾರ: ಧರ್ಮಗಳು ನಾಲ್ಕು ಗೋಡೆಗಳ ಮಧ್ಯೆ ಇರಲಿ, ಹೊರಗಡೆ ನಾವೆಲ್ಲರೂ ಮನುಷ್ಯರಾಗಿ ಬದುಕಬೇಕು. ಜಾತಿ-ಧರ್ಮಗಳಿಗೆ ಸೀಮಿತವಾಗದೆ ಸರ್ವರ ಏಳಿಗೆಗಾಗಿ ಶ್ರಮಿಸುವುದೇ ನಿಜವಾದ ಮಾನವ ಧರ್ಮ, ಎಂದು ಪ್ರಮುಖ ಚಿಂತಕ ಡಾ. ರಝಾಕ್ ಉಸ್ತಾದ್ ತಿಳಿಸಿದರು.



ಶನಿವಾರದಂದು ಪಟ್ಟಣದ ಮೇಥೋಡಿಸ್ಟ ಚರ್ಚ್ ಸಭಾಂಗಣದಲ್ಲಿ ಸ್ಥಳೀಯ ಮಾನವ ಬಂಧುತ್ವ ವೇದಿಕೆ ಕರ್ನಾಟಕ, ತಾಲೂಕು ಸಂಚಾಲನಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಗ್ರಾಮ ಸಂಚಾಲಕರ ನಾಯಕತ್ವ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದ್ದರು.

ನಮ್ಮ ಸಂವಿಧಾನವು ಜಗತ್ತಿನಲ್ಲಿಯೇ ಏಕಕಾಲಕ್ಕೆ ಎಲ್ಲರಿಗೂ ಸಮಾನ ಹಕ್ಕು ಮತ್ತು ಘನತೆಯಿಂದ ಬದುಕುವ ಅವಕಾಶ ನೀಡಿದ ಏಕೈಕ ದಾಖಲೆ. ಅನ್ಯಾಯವಾದಲ್ಲಿ ಗೌರವಯುತವಾಗಿ ಪ್ರಶ್ನೆ ಮಾಡುವ ಹಕ್ಕನ್ನು ಸಂವಿಧಾನ ನೀಡಿದೆ. ಇಂದಿನ ಯುವಕರು ಸಂವಿಧಾನದ ಆಶಯದಂತೆ ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನವ ಬಂಧುತ್ವ ವೇದಿಕೆಯ ಸಿರವಾರ ತಾಲೂಕ ಸಂಚಾಲಕರಾದ ಮೇಶಕ್ ದೊಡ್ಡಮನಿ ಅವರು, ಮಾನವ ಬಂಧುತ್ವ ವೇದಿಕೆಯು ಶಾಲಾ-ಕಾಲೇಜುಗಳಲ್ಲಿ ಹಾಗೂ ಸಾಮಾಜಿಕ ರಂಗದಲ್ಲಿ ನಿರಂತರವಾಗಿ ಜಾಗೃತಿ ಮೂಡಿಸುತ್ತಿದೆ. ಯುವಕರು ಕೇವಲ ವೈಯಕ್ತಿಕ ಬೆಳವಣಿಗೆಗೆ ಸೀಮಿತವಾಗದೆ, ಸಮಾಜದ ಸಮಸ್ಯೆಗಳನ್ನು ತಮ್ಮದೇ ಸಮಸ್ಯೆ ಎಂದು ಭಾವಿಸಿ ಬಗೆಹರಿಸಲು ಮುಂದಾಗಬೇಕು, ಎಂದು ಕರೆ ನೀಡಿದರು.

ವೇದಿಕೆಯ ಮೇಲೆ ಡಾ. ಎರ್ರಿಸ್ವಾಮಿ, ರಾಜೇಶ್ವರಿ ಪೂಜಾರಿ, ನಿಂಗಯ್ಯ ಸೈದಾಪುರ, ಇಬ್ರಾಹಿಂ, ಶಿವುಕುಮಾರ್ ಹೆಗ್ಗಡದಿನ್ನಿ, ಸತ್ತಾರ್ ಸಾಬ್, ವೆಂಕಟೇಶ ಶಂಕ್ರಿ, ಇರ್ಫಾನ್ ಬಡಿಗೇರ್, ಹನಮಂತ್ರಾಯ ಬಾಗಲವಾಡ, ಪ್ರದೀಪ್ ಮಾಡಗಿರಿ, ರಮೇಶ್ ಮಲ್ಲಟ್, ಬಸವರಾಜ್ ಮಲ್ಲಟ್,

3 ನೇ ಪುಟಕ್ಕೆ

ಕಸಾಪ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಮಹಿಳೆಯರು ಸ್ಪರ್ಧಿಸಲಿ-ರೇಖಾ ಬಡಿಗೇರ್

ರಾಯಚೂರು : ಏ. 26.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರ ಚುನಾವಣೆ ಹತ್ತಿರ ಬರುತ್ತಿದ್ದು ಈ ಬಾರಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಜಿಲ್ಲೆಯ ಮಹಿಳೆಯರು ಸ್ಪರ್ಧೆ ಮಾಡಲಿ ಎಂದು ಸಾಹಿತಿ ರೇಖಾ ಬಡಿಗೇರ್ ಮಹಿಳೆಯರಲ್ಲಿ ಮನವಿ ಮಾಡಿದ್ದಾರೆ.



ಈ ಕುರಿತು ಶುಕ್ರವಾರ ಪ್ರಕಟಣೆ ನೀಡಿರುವ ಅವರು, ಜಿಲ್ಲೆ, ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಅನೇಕ ಮಹಿಳಾ ಸಾಹಿತಿಗಳಿದ್ದಾರೆ.

ಅಲ್ಲದೇ ಕಸಾಪದಲ್ಲಿ ಇದುವರೆಗೆ ಜಿಲ್ಲೆಯ ಮಹಿಳೆಯರಿಗೆ ತಾಲೂಕು ಅಧ್ಯಕ್ಷ ಸ್ಥಾನ ಅಥವಾ ಪದಾಧಿಕಾರಿಗಳ ಸ್ಥಾನಕ್ಕಷ್ಟೇ ಸೀಮಿತಗೊಳಿಸುತ್ತಾ ಬರಲಾಗಿದೆ. ನಾಮಕೇವಾಸ್ತೆ ನೇಮಕ ಮಾಡುವುದು ನಡೆಯುತ್ತಿದೆ.

ಜಿಲ್ಲಾಧ್ಯಕ್ಷ ಚುನಾವಣೆಗೆ ಪುರುಷರೇ ಸ್ಪರ್ಧೆ ಮಾಡುತ್ತಿರುವುದು ಕಂಡುಬರುತ್ತಿದೆ. ಈ ಹಿನ್ನೆಲೆ ಈ ಬಾರಿ ಹೆಚ್ಚಿನ ಸಂಖ್ಯೆಯ ಮಹಿಳೆಯರೂ ಸ್ಪರ್ಧೆ ಗಿಳಿಯಬೇಕಿದೆ. ಮಹಿಳೆಯರು ಜಿಲ್ಲಾಧ್ಯಕ್ಷರಾದಾಗ ಜಿಲ್ಲೆಯಲ್ಲಿ ಮಹಿಳೆಯರಿಗೂ ಒಂದು ಉನ್ನತ ಸ್ಥಾನಮಾನ ದೊರೆಯಲಿದೆ. ಹಾಗಾಗಿ, ಮಹಿಳೆಯರೂ ಸಾಹಿತ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ಬರಬೇಕಿದೆ ಎಂದಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಪ್ರತಿಯೊಬ್ಬ ಮಹಿಳೆಯರಿಗೂ ಇದೆ. ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾಧ್ಯಕ್ಷರು ಮಹಿಳೆಯರು ಇದ್ದಾರೆ. ಹಾಗಾಗಿ , ಈ ಬಾರಿ ನಡೆಯುವ ಚುನಾವಣೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಜಿಲ್ಲೆಯ ಮಹಿಳೆಯರು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಲಿ ಎಂದು ಕಲಾ ಸಂಕುಲ ಸಂಸ್ಥೆ ಅಧ್ಯಕ್ಷೆ, ಲೇಖಕಿ, ಉಪನ್ಯಾಸಕಿಯೂ ಆಗಿರುವ ರೇಖಾ ಬಡಿಗೇರ್ ತಿಳಿಸಿದ್ದಾರೆ.

ವಾಸವಿ ಜಯಂತಿ ಆಚರಣೆ ಭಸವಚಿತ್ರ ಮೆರವಣಿಗೆ



ಸಿರವಾರ.ಏ.26-

ವಾಸವಿ ಜಯಂತಿ ಪ್ರಯುಕ್ತ ಪಟ್ಟಣದ ಬಯಲು ಆಂಜನೇಯ್ಯ ದೇವಸ್ಥಾನದ ಮುಂಭಾಗದಲ್ಲಿ ವಾಸವಿ ಭಾವಚಿತ್ರವನ್ನು ವಿಶೇಷವಾಗಿ ಅಲಂಕರಿಸಿ ಅಲಿಂದ ಮುಖ್ಯರಸ್ತೆಯ ಮಾರ್ಗವಾಗಿ ಮರಾಟ ರಸ್ತೆಯಲ್ಲಿರುವ ವೆಂಕಟೇಶ್ವರ ದೇವಸ್ಥಾನದ ವರೆಗೂ ಕುಂಬ ಕಳಸದೊಂದಿಗೆ ಮೆರವಣಿಗೆ ಮಾಡಲಾಯಿತು. ವಾಸವಿ ಜಯಂತಿ ಪ್ರಯುಕ್ತ ದೇವಾಲಯದಲ್ಲಿ ಬೆಳಗ್ಗೆ ವಾಸವಿ ಹೋಮ, ಪೂರ್ಣಾಹುತಿ, ಅಮ್ಮನವರಿಗೆ ಮಡಿಲಕ್ಕಿ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮ ಜರುಗಿದವು. ನಂತರ ಮಹಿಳೆಯರಿಗೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತು. ಎಂ ನರಸಿಂಹಯ್ಯ ಶೆಟ್ಟಿ ಗೌರವ ಅಧ್ಯಕ್ಷ,ಆರ್ ಜೆ ರಾಮ್ ಶೆಟ್ಟಿಅಧ್ಯಕ್ಷರು, ಪರಮೇಶ ಶೇಟ್ಟಿ,

ನವಲಕಲ್ ಶೇಷಯ್ಯ ಶೆಟ್ಟಿ, ದೇವಯ್ಯ ಶೆಟ್ಟಿ,ಸೂರ್ಯ ಪ್ರಕಾಶ ಶೆಟ್ಟಿ, ಚನ್ನಕೇಶವ ಶೆಟ್ಟಿ, ದೇವೇಂದ್ರ ಶೆಟ್ಟಿ, ಕೃಷ್ಣಆರರು ರಮೇಶ್ ಶೆಟ್ಟಿ ಆಲ್ಕೋಡ್, ರಾಜೇಂದ್ರ ಶೆಟ್ಟಿ, ವೆಂಕಟೇಶ್ ಶೆಟ್ಟಿ ಭೀಮಯ್ಯ ಶೆಟ್ಟಿ, ಚಿಂತಯ್ಯಶೆಟ್ಟಿ ಮಾಣಿಕಯ್ಯಸೇಟ್ಟಿ, ರವಿಕುಮಾರ ನವಲಕಲ್, ದೇವಣ್ಣ ಶೇಟ್ಟಿ ನವಲಕಲ್, ಮಂಜುನಾಥ ಅತ್ತನೂರು, ವಿರೇಂದ್ರಶೇಟ್ಟಿ ಜಕ್ಕಲದಿನ್ನಿ, ಅಶೋಕ ಶೇಟ್ಟಿ ನವಲಕಲ್, ಈರಣ್ಣ ಶೇಟ್ಟಿ ನವಲಕಲ್, ವಾಸವಿ ಮಹಿಳಾ ಮಂಡಳಿ ಆರ್ಯ ವೈಶ್ಯ ಸಮಾಜದವರು ಇದರು.

ಅಮೃತ ನೆರಳಿನಲ್ಲಿ ಅಮೃತವೇ ಮಾಯ...





ರಾಯಚೂರು,ಏ.25-

ಮಹಾನಗರ ಪಾಲಿಕೆ ಯೋಜನೆಯ ಅಮೃತ ನೆರಳಿನಲ್ಲಿ ಅಮೃತವೇ ಮಾಯ (ಶಡ್ಡಿನ ಬಿಂದಿಗೆಗಳಲ್ಲಿ ನೀರೇ ಇಲ್ಲ.

ನಗರದ ಡಿ.ಸಿ. ಬಂಗಲೆ ಹತ್ತಿರವಿರಯವ ಮಹಾನಗರ ಪಾಲಿಕೆಯಿಂದ ಲಕ್ಷಾಂತ ರೂ ವೆಚ್ಚದಲ್ಲಿ ನಿರ್ಮಿಸಿದ ಅಮೃತ ನೆರಳು ಎಂಬ ಬೃಹದಾಕಾರದ ಅರವಟಿಗೆಯಲ್ಲಿ ನೀರೇ ಇಲ್ಲ ಅದರಲ್ಲಿ ಒಬ್ಬ ಸಿಬ್ಬಂಧಿಯೂ ಇಲ್ಲದಂತಾಗಿದೆ.

ಪಾಲಿಕೆಯಿಂದ ಶಡ್ಡು ಪಟ್ಟೆ ಹುಡುಗರು ಚಿಗರೇಟ್ ಗುಟ್ಕಾ ಅನೈತಿಕ ಚಟುವಟಿಕೆ ನಡೆಸುವ ತಾಣವಾಗಿದೆ.

ಅಲ್ಲಲ್ಲಿ ನೀರಿನ ಬಾಟಲ್ ಬಿದ್ದದ್ದನ್ನು ಕಂಡರೆ ಇಲ್ಲಿ ಮಧ್ಯಪಾನದ ಚಟುವಟಿಕೆಗಳನ್ನೂ ನಡೆಸುವಂತ ಅನುಮಾನ ಮೂಡುತ್ತದೆ.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಬಿ.ಜೆ.ಪಿ. ಮುಖಂಡರಾದ ಶರಣ ಬಸವ ಹಿರೇಮಠ ಸುರಭಿಯವರು ಮಹಾನಗರ ಪಾಲಿಕೆಯು ಲಕ್ಷಾಂತರ ರೂ. ವೆಚ್ಚದಲ್ಲಿ ನಿರ್ಮಿಸಿದ ಅಮೃತ ನೆರಳು ಎಂಬುದು ಪುಂಡ ಪೋಕರಿ

3 ನೇ ಪುಟಕ್ಕೆ

ಕೃಷ್ಣ ದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನ್ ಅಭಿವೃದ್ಧಿ ಗೆ ಕೆಕೆಆರ್ ಡಿಬಿ ಅನುದಾನ



ರಾಯಚೂರು ನಗರ ವಿಧಾನ ಸಭಾ ಕ್ಷೇತ್ರದ ವಾರ್ಡ ನಂ 21ರ ಕೃಷ್ಣ ದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನ್ ಅಭಿವೃದ್ಧಿ ಗೆ ಕೆಕೆಆರ್ ಡಿಬಿ ಅನುದಾನದ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಅವರು ಭೂಮಿ ಪೂಜೆ ನಡೆಸಿದರು.

ವಾರ್ಡ ನಂ.21ರ ಕೃಷ್ಣ ದೇವರಾಯ ಕಾಲೋನಿಯ ಬಿಲ್ವ ಮಂದಿರ ಗಾರ್ಡನ್ ಅಭಿವೃದ್ಧಿ ಗೆ ಕೆಕೆಆರ್ ಡಿಬಿ ಯ 30.00 ಲಕ್ಷ ರೂ ಅನುದಾನದಲ್ಲಿ ಅಭಿವೃದ್ಧಿ ಪಡಿಸಲು ಇಂದು ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಎ.ವಸಂತಕುಮಾರ ಅವರು ಇಂದಿಗೂ ನಗರ ವಿಧಾನ ಸಭಾ ಕ್ಷೇತ್ರದ ಹಲವಾರು ಬಡಾವಣೆಗಳಲ್ಲಿ ಇರುವ ಗಾರ್ಡನಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಸಾಕಷ್ಟು ಇದ್ದು, ನಾಗರೀಕರಿಗೆ ವಾಯು ವಿಹಾರ, ಮಕ್ಕಳಿಗೆ ಆಡಲು ಸೂಕ್ತ ಸೌಲಭ್ಯ ಒದಗಿಸುವದು ನಮ್ಮ ಸರಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಇನ್ನೂ ಹೆಚ್ಚಿನ ಸೌಲಭ್ಯ ಒದಗಿಸಲು ಪ್ರಯತ್ನಿಸಲಾಗುವದು ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ ಕರೀಮ, ಮಾಹನಗರ ಪಾಲಿಕೆ ಮಾಜಿ ಸದಸ್ಯ ನಾಗರಾಜ್, ಯೋಜನಾ ಆಯೋಗದ ಸದಸ್ಯ ಡಾ.ರಝಾಕ ಉಸ್ತಾದ, ಜೆ.ಸತ್ಯನಾಥ, ದೀಪಕ ರೆಡ್ಡಿ, ಅಂಜಿನಕುಮಾರ, ಮೊಹಮ್ಮದ ಉಸ್ಮಾನ, ಸೈಯದ ಸುಲ್ತಾನ, ಮೊಹಮ್ಮದ ರಫಿ,ನಿವೃತ್ತ ಇಂಜಿನಿಯರ್ ವೆಂಕಟೇಶ ಹಾಗೂ ಇತರರು ಉಪಸ್ಥಿತರಿದ್ದರು.

3ಕೊ..89 ನಾನಾ ಅಭಿವೃದ್ಧಿ ಕಾಮಗಾರಿಗೆ ಸಚಿವರು ಭೂಮಿಪೂಜೆ

ಎಲ್ಲಾ ಸಮಾಜದ ಅಭಿವೃದ್ಧಿಗೆ ಅನುದಾನ -ಬೋಸರಾಜು

ಸಿರವಾರ.ಏ.26-

ಪಟ್ಟಣ ತಾಲೂಕು ಕೇಂದ್ರವಾಗಿದ್ದರಿಂದ ಎಲ್ಲಾ ಸಮಾಜದ ಜನರ ಅನುಕೂಲಕ್ಕಾಗಿ ಹೆಚ್ಚಿನ ಅನುದಾನ ಬಳಸಿ ಜನರಿಗೆ ಅವಶ್ಯ ನಾನಾ ಮೂಲಸೌಲಭ್ಯ ಒದಗಿಸಲು ಪ್ರಯತ್ನ ಮಾಡುತಿದ್ದೇನೆ. ಪಟ್ಟಣದ ಸರ್ವಾಂಗೀಣ ಅಭಿವೃದ್ದಿಗೆ ನಾನು ಬದ್ಧನಾಗಿದ್ದೇನೆ,'' ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್. ಎಸ್. ಬೋಸರಾಜು ಹೇಳಿದರು.



ಪಟ್ಟಣದ ವಿವಿಧ ಕಡೆಗಳಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ವಿಶೇಷ ಅನುದಾನದಡಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಅಂದಾಜು 3.85 ಕೋಟಿ ರೂ. ವೆಚ್ಚದ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

''ಈಗಾಗಲೇ ಪಟ್ಟಣದಲ್ಲಿ ನಾನಾ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಸದ್ಯ ಕಮ್ಮ ಸಮುದಾಯ, ವೆಂಕಟೇಶ್ವರ ದೇವಸ್ಥಾನ, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ, ಅಂಬಾದೇವಿ ಮಠ, ಗಂಗಾಮತಸ್ಥ ಸಮುದಾಯ ಭವನ,


ಹಡಪದ ಅಪ್ಪಣ್ಣ, ಸವಿತಾ ವಿಶ್ವಕರ್ಮ ಸಮುದಾಯಗಳಿಗೆ ಸಮುದಾಯ ಭವನ, ಚರ್ಚ್ ಅಭಿವೃದ್ಧಿ ಕಾಮಗಾರಿ, ಈಶ್ವರ, ವೀರಭದ್ರೇಶ್ವರ ದೇವಸ್ಥಾನ ಅಭಿವೃದ್ಧಿ ಕಾಮಗಾರಿ, ಗದ್ದಗಿಮಠದ ಕಾಂಪೌಂಡ್ ವಾಲ್ ನಿರ್ಮಾಣ,

3 ನೇ ಪುಟಕ್ಕೆ

ಅರಿವಿನ ಗವಿಯಲ್ಲಿ ಅಪ್ಪಣ್ಣನವರ ಮೂರ್ತಿ ಪುನಃ ಪ್ರತಿಷ್ಠಾಪನೆಗೆ ಒತ್ತಾಯಿಸಿ ಸಚಿವರಿಗೆ ಮನವಿ

ಸಿರವಾರ ಏ.26-

ಬಸವಕಲ್ಯಾಣದ ಅನುಭವ ಮಂಟಪದ ತ್ರಿಪುರಾಂತ ಕೆರೆ ಹತ್ತಿರ ಇರುವ ಹಡಪದ ಅಪ್ಪಣ್ಣನವರ ಅರಿವಿನ ಗವಿಯಲ್ಲಿ ಅಪ್ಪಣ್ಣನವರ ಮೂರ್ತಿ ಪುನಃ ಪ್ರತಿಷ್ಠಾಪನೆಗೆ ಒತ್ತಾಯಿಸಿ ತಾಲೂಕು ಹಡಪದ ಅಪ್ಪಣ್ಣ ಸಮಾಜದಿಂದ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್ ಎಸ್ ಬೋಸರಾಜು ಮತ್ತು ಶಾಸಕರಾದ [illegible] ಮೂಲಕ ಸಿಎಂ ಅವರಿಗೆ ಮನವಿ ನೀಡುವ ಮೂಲಕ ಒತ್ತಾಯಿಸಿದ್ದರು.



ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪದ ತ್ರಿಪುರಾಂತ ಕೆರೆ ಹತ್ತಿರ 12 ನೇ ಶತಮಾನದ ಅನೇಕ ಬಸವಾದಿ ಶರಣರ ಅರಿವಿನ ಗವಿಗಳು ಇರುವುದಾಗಿ ಇತಿಹಾಸ ಸಾರುತ್ತದೆ. ಅದೇ ರೀತಿ ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣನವರ ಅರಿವಿನ ಗುಹೆ ಪಕ್ಕದಲ್ಲಿಯೇ ಅವರ ಆಪ್ತಕಾರ್ಯದರ್ಶಿಯಾಗಿದ್ದ ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯೂ ಅಲ್ಲಿ ಅಸ್ತಿತ್ವದಲ್ಲಿದೆ. ಆದರೆ, ಶಿವಶರಣ ಹಡಪದ ಅಪ್ಪಣ್ಣನವರ ಅರಿವಿನ ಗವಿಯನ್ನು ಬಸವೇಶ್ವರ ದೇವಸ್ಥಾನದ ಪಂಚಕಮಿಟಿಯವರು ಅಕ್ರಮವಾಗಿ ಹಸ್ತಕ್ಷೇಪ ಮಾಡಿ ಅನ್ಯ ಶರಣರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿರುವುದು ಖೇದನೀಯ ಸಂಗತಿ. ಇದರಿಂದ ಶಿವಶರಣ ಹಡಪದ ಪಣ್ಣನವರಿಗೆ ಗೌರವಕ್ಕೆ ಧಕ್ಕೆ ಆಗಿದೆ. ಅಲ್ಲದೇ ನಮ್ಮ ಸಮುದಾಯದ ಭಕ್ತಿಭಾವನೆಗಳಿಗೆ ತೀವ್ರ ನೋವುಂಟಾಗಿದ್ದು, ನಮ್ಮ ಶರಣರ ಇತಿಹಾಸದ ಮೌಲ್ಯ ಕುಗ್ಗುವಂತಾಗಿದೆ. ಅಲ್ಲದೇ ಬಸವಕಲ್ಯಾಣದ ಅಭಿವೃದ್ಧಿ ಪ್ರಾಧಿಕಾರದವರು

3 ನೇ ಪುಟಕ್ಕೆ

ಓದು ಮತ್ತು ಜ್ಞಾನ ಹಂಚಿಕೆಗೆ ಗ್ರಂಥಾಲಯಗಳು ಸಹಕಾರಿ : ಡಾ. ಕಾಡದೇವರಮಠ



ಕಲಬುರಗಿ:ಏ.25: ಪ್ರಸ್ತುತ ಗ್ರಂಥಾಲಯಗಳು ತಂತ್ರಜ್ಞಾನದ ನೆರವಿನಿಂದ ಡಿಜಿಟಲ್ ಸಂಪನ್ಮೂಲ ಕೇಂದ್ರಗಳಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಗುರಿ ಸಾಧನೆ ಮತ್ತು ಬೌದ್ಧಿಕ ಜ್ಞಾನಾರ್ಜನೆಗೆ ಮುಕ್ತ ಅವಕಾಶ ನೀಡುತ್ತವೆ. ಓದುವ ಹವ್ಯಾಸ ಮತ್ತು ಜ್ಞಾನ ಹಂಚಿಕೆಗೆ ಸಹಾಯಕವಾಗಿವೆ ಎಂದು ಎಂದು ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಅಧ್ಯಕ್ಷ ಡಾ. ಎಸ್.ಎಲ್. ಕಾಡದೇವರಮಠ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಕಲಬುರಗಿ ಜಿಲ್ಲಾ ಘಟಕದ ಉದ್ಘಾಟನೆ, ಕಲ್ಯಾಣ ಕರ್ನಾಟಕ ಗ್ರಂಥಪಾಲಕರ ಸಂಘಕ್ಕೆ ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಪ್ರಮಾಣವಚನ ಬೋಧನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯ, ಕಾಲೇಜು ಶೈಕ್ಷಣಿಕ ಬೆಳವಣಿಗೆಗೆ ಗ್ರಂಥಾಲಯಗಳು ಮಹತ್ವದ ಪಾತ್ರವಹಿಸುತ್ತಿವೆ. ಗ್ರಂಥಾಲಯ ಮತ್ತು ಗ್ರಂಥಪಾಲಕರ ಹುದ್ದೆ ಅಗತ್ಯತೆಯನ್ನು ಸರ್ಕಾರ ಮನಗಾಣಬೇಕಿದೆ. ಪ್ರಸ್ತುತ ಸುಮಾರು 2000 ಪದವಿ ಪೂರ್ವ ಕಾಲೇಜುಗಳ ಪೈಕಿ ಕೇವಲ 90 ಕಾಲೇಜುಗಳಲ್ಲಿ ಮಾತ್ರ ಗ್ರಂಥಪಾಲಕರಿದ್ದಾರೆ. 2010 ರಿಂದಲೂ ಪದವಿ ಕಾಲೇಜುಗಳಲ್ಲಿರುವ ಗ್ರಂಥಪಾಲಕರ ಹುದ್ದೆಗಳನ್ನು ಸರ್ಕಾರ ಇದುವರೆಗೂ ಭರ್ತಿ ಮಾಡಿಲ್ಲ. ರಾಜ್ಯದ ಶಾಲಾ ಕಾಲೇಜು, ವಿಶ್ವವಿದ್ಯಾಲಯ ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಸರ್ಕಾರಕ್ಕೆ ಗ್ರಂಥಾಪಾಲಕರ ಸಂಘದಿಂದ ಈಗಾಗಲೇ ಮನವಿ ಸಲ್ಲಿಸಲಾಗಿದೆ ಎಂದರು.

ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ. ಸುರೇಶ್ ಜಂಗೆ ಮಾತನಾಡಿ ಗ್ರಂಥಾಲಯ ವೃತ್ತಿಪರರು ಗ್ರಂಥಾಲಯ ಕ್ಷೇತ್ರದ ನಾವೀನ್ಯತೆ ಮತ್ತು ತಂತ್ರಜ್ಞಾನ ಕೌಶಲ್ಯವನ್ನು ರೂಢಿಸಿಕೊಂಡು ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಹೊಸ ಹೊಸ ವಿಷಯ, ಸಂಶೋಧನಾ ಕ್ಷೇತ್ರದ ಪ್ರಕಟಿತ ನಿಯತಕಾಲಿಕೆ, ಆನ್‌ಲೈನ್ ಸೇವೆ ಮೂಲಕ ಓದುಗರ ಮತ್ತು ವಿದ್ಯಾರ್ಥಿಗಳನ್ನು ಅಧ್ಯಯನದ ಕಡೆಗೆ ಒಲವು ಮೂಡಿಸಬೇಕೆಂದು ಗ್ರಂಥಾಲಯದ ಮಹತ್ವವನ್ನು ವಿವರಿಸಿದರು.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೆ. ಡಿ. ಬಿ. ಪಾಟೀಲ್ ಮಾತನಾಡಿ ಗ್ರಂಥಾಲಯ ಮತ್ತು ಗ್ರಂಥಪಾಲಕರ ವೈಯಕ್ತಿಕ ಜವಾಬ್ದಾರಿಗಳು, ಗುರಿ ಮತ್ತು ಸಾಧನೆ, ಕಾರ್ಯನಿರತ ಗ್ರಂಥಪಾಲಕರ ಕೌಶಲ್ಯಾಭಿವೃದ್ಧಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ಆಯೋಜಿಸಬೇಕೆಂದು ಸಲಹೆ ನೀಡಿ ಅಗತ್ಯ ಬೆಂಬಲ ನೀಡುವುದಾಗಿ ಭರವಸೆ ನೀಡಿದರು ಮತ್ತು ಡಾ. ಪರಮಾನಂದ ಹಾಗದಗಿ ಗ್ರಂಥಪಾಲಕರ ಸಂಘ ಬೆಳೆದು ಬಂದ ದಾರಿ ಮತ್ತು ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸಿದರು.

ಕಲಬುರ್ಗಿ ಜಿಲ್ಲಾ ಅಧ್ಯಾಯದ ನೂತನ ಅಧ್ಯಕ್ಷೆ ಡಾ. ಸಾವಿತ್ರಿ ಕೃಷ್ಣ ಮಾತನಾಡಿ ಗ್ರಂಥಾಲಯ ವೃತ್ತಿಪರರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತೇನೆ. ಹಿರಿಯರ ಸಲಹೆ ಮತ್ತು ಎಲ್ಲರ ಸಹಕಾರದೊಂದಿಗೆ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದೆಂದರು. ನಿವೃತ್ತ ಗ್ರಂಥಪಾಲಕರು ಡಾ. ಗಣಪತಿ ಸಿಂಧೆ ಮತ್ತಿತರರಿದ್ದರು. ಡಾ. ರಾಜಶ್ರೀ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಡಾ. ದಾನಪ್ಪ ವಗ್ಗಿ ನಿರೂಪಿಸಿದರು. ಡಾ. ಸಾವಿತ್ರಿ ಪಟ್ಟಣ ವಂದಿಸಿದರು. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಹಾಗೂ ಇನ್ನಿತರರಿದ್ದರು.

ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಕಲಬುರಗಿ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ: ಡಾ. ಸುರೇಶ ಜಂಗೆ (ಸಲಹೆಗಾರರು) ಡಾ. ಸಾವಿತ್ರಿ ಕೃಷ್ಣ (ಅಧ್ಯಕ್ಷರು). ಡಾ. ಗೌತಮಿ ಮತ್ತು ಡಾ ಫರಹೀನ (ಉಪಾಧ್ಯಕ್ಷರು), ಡಾ. ದಾನಪ್ಪ ವಗ್ಗಿ (ಕಾರ್ಯದರ್ಶಿ), ಡಾ. ಸಾವಿತ್ರಿ ಪಟ್ಟಣ (ಸಂಘಟನಾ ಕಾರ್ಯದರ್ಶಿ), ಡಾ ರಾಜಶ್ರೀ (ಖಜಾಂಚಿ), ಆಡಳಿತ ಮಂಡಳಿ ಸದಸ್ಯರಾಗಿ ಡಾ. ಅರವಿಂದ, ಡಾ ವಿನೋದಕುಮಾರ, ಡಾ ಸಯ್‌ದ್ ಸರಮತ್, ಡಾ ಪ್ರತಿಭಾ, ಡಾ. ನಾಗರಾಜ ಮತ್ತು ಶ್ರೀ ಭೀಮರೆಡ್ಡಿ ಅವರನ್ನು ಆಯ್ಕೆ ಮಾಡಲಾಯಿತು.

ಸೇವಾಲಾಲ ಮಹಿಳಾ ಕಲಾ ಸಂಘದಿಂದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸಂಭ್ರಮ



ಬೀದರ:ಏ.24: ಸೇವಾಲಾಲ ಮಹಿಳಾ ಕಲಾ ಮತ್ತು ಸಾಂಸ್ಕೃತಿಕ ಸಂಘ (ರಿ) ಬಗದಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಬಂಜಾರಾ ಹಾಗೂ ಲಂಬಾಣಿ ಹಾಡುಗಳು, ಭಜನೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬೀದರ್ ತಾಲೂಕಿನ ಬಗದಲ್ ಗ್ರಾಮದ ಶ್ರೀಪತ ಮಹಾರಾಜ ಮಂದಿರದಲ್ಲಿ ಬುಧವಾರ ಅದ್ದೂರಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ್ನ ಸಹಾಯಕ ನಿರ್ದೇಶಕರಾದ ಶ್ರೀ ಸಿದ್ದರಾಮ ಶಿಂಧೆ ಅವರು, ಬಂಜಾರಾ ಮತ್ತು ಲಂಬಾಣಿ ಸಮುದಾಯದ ಸಂಸ್ಕೃತಿ ಕರ್ನಾಟಕದ ವೈವಿಧ್ಯಮಯ ಪರಂಪರೆಯ ಅಮೂಲ್ಯ ಭಾಗವಾಗಿದೆ ಎಂದು ಹೇಳಿದರು.

ಅವರು ಮಾತನಾಡುತ್ತಾ, ''ಬಂಜಾರಾ ಹಾಗೂ ಲಂಬಾಣಿ ಜನಾಂಗದ ಜನಪದ ಹಾಡುಗಳು, ಭಜನೆಗಳು, ನೃತ್ಯಗಳು ಮತ್ತು ವೇಷಭೂಷಣಗಳು ನಮ್ಮ ರಾಜ್ಯದ ಸಾಂಸ್ಕೃತಿಕ ಸಂಪತ್ತಿನ ಪ್ರತೀಕಗಳಾಗಿವೆ. ಈ ಸಮುದಾಯದ ಜೀವನ ಶೈಲಿ, ಆಚರಣೆಗಳು ಹಾಗೂ ಸಂಗೀತ ಪರಂಪರೆ ಇಂದಿನ ಯುವಪೀಳಿಗೆಗೆ ಪರಿಚಯವಾಗಬೇಕು. ಇಂತಹ ಕಾರ್ಯಕ್ರಮಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ನಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸೇತುವೆಯಾಗಿವೆ,'' ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾಲಾಲ ಮಹಿಳಾ ಕಲಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಶ್ರೀಮತಿ ಶಾರದಾಬಾಯಿ ರಾಠೋಡ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಗಳಾದ ಸುಧಾಕರ ಹಾಗೂ ಕು. ಕ್ಲೆಮೆಂಟಿನಾ ಉಪಸ್ಥಿತರಿದ್ದರು. ಬಗದಲ್ ತಾಂಡಾದ ಗ್ರಾಮಸ್ಥರಾದ ವೀರಶೆಟ್ಟಿ ದೇಸಾಯಿ, ಗುರು ರಾಜಗಿರಿ, ಮುಶಾಕ್ ಮಹಾರಾಜ, ರಮೇಶ್, ನರಸಿಂಗ ಮತ್ತು ದಿನೇಶ್ ಸೇರಿದಂತೆ ಅನೇಕರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ಸಂಗೀತಾ ಸಿದ್ರಾಮಪ್ಪ ವಕೀಲವೃತ್ತಿ ಸೇವೆಗಾಗಿ ಪುನೀತರಾಜಕುಮಾರ ರಾಜ್ಯ ಮಟ್ಟದ ಪ್ರಶಸ್ತಿ



ಬೀದರಃ ಏ.25:ಕರ್ನಾಟಕ ರಕ್ಷಣಾ ವೇದಿಕೆ ಕಾವಲುಪಡೆ ಬೀದರ ಜಿಲ್ಲಾ ಹಾಗೂ ರಾಜ್ಯ ಘಟಕ ವತಿಯಿಂದ ಇತ್ತಿಚೇಗೆ ಕರ್ನಾಟಕ ಸಾಂಸ್ಕೃತಿಕ ಸಭಾಂಗಣದಲ್ಲಿ ಪವರ್ ಸ್ಟಾರ್ ಪುನೀತ ರಾಜಕುಮಾರ ರವರ 51 ನೇ ಹುಟ್ಟು ಹಬ್ಬವನ್ನು ಆಚರಣೆ ಮಾಡಲಾಯಿತು. 51 ಸಾಧಕರಿಗೆ ರಾಜ್ಯ ಮಟ್ಟದ ಕರ್ನಾಟಕ ರತ್ನ ಪುನೀತ ರಾಜಕುಮಾರ ಪ್ರಶಸ್ತಿಯನ್ನು ಕರ್ನಾಟಕ ಪ್ರದೇಶ ಗಡಿ ಅಭೀವೃದ್ದಿ ಪ್ರಾಧಿಕಾರದ ಸದಸ್ಯರಾದ ಡಾ. ಸಂಜುಕುಮಾರ ಅತಿವಾಳೆ ಉದ್ಘಾಟನೆ ಮಾಡಿರುವ ಸಮಾರಂಭದ ದಿವ್ಯ ಸಾನಿಧ್ಯವನ್ನು ಹವಾಮಲ್ಲಿನಾಥ ಸ್ವಾಮಿಜಿ ವಹಿಸಿದ ಕಾರ್ಯಕ್ರಮದ ಅಧ್ಯಕ್ಷತೆ ಕರವೇ ಕಾವಲುಪಡೆ ರಾಜ್ಯಾಧ್ಯಕ್ಷರಾದ ಡಾ. ಎಚ್ ಸುರೇಶ ವಹಿಸಿದರು ಪಂಚಗ್ಯಾರಟಿ ಸಮಿತಿ ಅಧ್ಯಕ್ಷರಾದ, ಅವೃತ್ರಾವ ಚಿಮಕೊಡೆ, ಕರವೇ ರಾಜ್ಯ ಉಪಾಧ್ಯಕ್ಷ ವಿ ಎಂ ಭಂಗೂರಿ, ಜಿಲ್ಲಾಧ್ಯಕ್ಷರಾದ ಅವಿನಾಶ ಬುದೇರಾಕರ, ಜಿಲ್ಲಾ ಉಪಾಧ್ಯಕ್ಷ ಸ್ಟೀಪನ ಪೌಲ್ ಹಾಗೂ ಕಾರ್ಯಕರ್ತರು ಆಯೋಜನೆ ಮಾಡಿರುವ ಪುನೀತ ಉತ್ಸವ ಕಾರ್ಯಕ್ರಮದಲ್ಲಿ ಕಾರಣಾಂತರಗಳಿದ ಗೈರುಹಾಜರಾಗಿರುವ ಶ್ರೀಮತಿ ಸಂಗೀತಾ ಸಿದ್ರಾಮಪ್ಪ ರವರು ವಕೀಲವೃತ್ತಿ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಯನ್ನು ಶನಿವಾರ ಅವರ ಸ್ವಗೃದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಕೀಲ ವೃತ್ತಿ ಸಮಾಜದಲ್ಲಿ ಅತ್ಯಂತ ಗೌರವಯುತವಾಗಿರುವ ವೃತ್ತಿಯಾಗಿದೆ. ಕಾನೂನು ಚೌಕಟ್ಟಿನಲ್ಲಿ ನ್ಯಾಯವನ್ನು ಒದಗಿಸಿಕೊಡುವ ವೃತ್ತಿಯಾಗಿದೆ. ಜನಸಾಮಾನ್ಯರ ನ್ಯಾಯದ ಧ್ವನಿಯಾಗಿ ಸಾಮಾಜಿಕ ಕಳಕಳಿ ಕಾಳಜಿಯುಳ್ಳವೃತ್ತಿಯಾಗಿದೆಯೆಂದು ಅವಿನಾಶ ಬುದೇರಾಕರ ಹೇಳಿದರು.



ಎಸ್.ಎಸ್.ಎಲ್.ಸಿ ಟಾಪರ್ಸ್‌ಗಳಿಗೆ ಜಿಲ್ಲಾಧಿಕಾರಿಗಳಿಂದ ಸನ್ಮಾನ

ಕಲಬುರಗಿ,ಏ.25-ಇತ್ತೀಚಿಗೆ ಪ್ರಕಟಗೊಂಡ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಹೆಚ್ಚಿನ ಅಂಕ ಪಡೆದ 6 ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಶುಕ್ರವಾರ ತಮ್ಮ ಕಚೇರಿಯಲ್ಲಿ ಸನ್ಮಾನಿಸಿ ಮಕ್ಕಳಿಗೆ

625ರ ಪೈಕಿ 623 ಅಂಕ ಪಡೆದು ಶೇ.99.68 ಪ್ರತಿಶತದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವ ಕಲಬುರಗಿ ದಕ್ಷಿಣ ವಲಯದ ಸಾವಳಗಿಯ ಅಜೀಮ್ ಪ್ರೇಮ್ ಜಿ ಶಾಲೆಯ ವಿದ್ಯಾರ್ಥಿ ಗಣೇಶ, ತಲಾ 622 ಅಂಕ ಪಡೆದು ಎರಡನೇ ಸ್ಥಾನ ಹಂಚಿಕೊಂಡಿರುವ ಕಲಬುರಗಿಯ ಶರಣಬಸವೇಶ್ವರ ವಸತಿ ಶಾಲೆಯ ವಿದ್ಯಾರ್ಥಿನಿಯರಾದ ಮಾಧವಿ, ಮೇಘನಾ ಮತ್ತು 620 ಅಂಕ ಪಡೆದು ತೃತೀಯ ಸ್ಥಾನ ಪಡೆದಿರುವ ಕಲಬುರಗಿಯ ಜಗತ್ ಪ್ರದೇಶದ ಎಸ್.ಸಿ-ಎಸ್.ಟಿ ಪ್ರತಿಭಾನಿತ್ವ ಶಾಲೆಯ ಭಾಗ್ಯಶ್ರೀ, ಎಸ್.ಆರ್.ಎನ್. ಮೆಹತಾ ಶಾಲೆಯ ಓಂಕಾರ ಹಸು ಹಾಗೂ ಜೇವರ್ಗಿ ತಾಲೂಕಿನ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ನಿಸರ್ಗಾ ಅವರನ್ನು ಡಿ.ಸಿ. ಅವರು ವಿಶೇಷವಾಗಿ ಸತ್ಕರಿಸಿ ಮೆಚ್ಚುಗೆಯ ಮಾತುಗಳನ್ನಾಡಿದರು. ಡಿ.ಡಿ.ಪಿ.ಐ ಶಂಕ್ರಮ ಢವಳಗಿ ಸೇರಿದಂತೆ ವಿದ್ಯಾರ್ಥಿಗಳು ಪಾಲಕರು ಇದ್ದರು.



ಆಧುನಿಕ ವೃತ್ತಿಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು

ಕಲಬುರಗಿ:ಏ.25: 'ಇಂದು ಕೇವಲ ಸರಕಾರದ ಕೆಲಸ ಕಾಯುತ್ತಾ ಕೂರುವಂತಿಲ್ಲ. ಆಧುನಿಕ ಸಂಸ್ಥೆಗಳು ತಮಗೆ ಬೇಕಾದ ಕೌಶಲ್ಯಗಳನ್ನು ನಿರೀಕ್ಷಿಸುತ್ತವೆ. ಹೀಗೆ ಈ ಕಾಲಕ್ಕೆ ಅಗತ್ಯವಾದ ಕೌಶಲ್ಯಗಳನ್ನು ಕಲಿಸಿ, ಈ ಕೌಶಲ್ಯಗಳ ಆಧಾರದಲ್ಲಿ ಉದ್ಯೋಗವನ್ನು ಕೊಡಿಸುವ ಉದ್ದೇಶದಿಂದ ದೇಶಪಾಂಡೆ ಫೌಂಡೇಷನ್ ಕೆಲಸ ಮಾಡುತ್ತಿದೆ. ಹಾಗಾಗಿ ಇಂದು ವಿದ್ಯಾರ್ಥಿಗಳನ್ನು ಈ ಕಾಲಕ್ಕೆ ಬೇಕಾದ ಕೌಶಲ್ಯಗಳನ್ನು ಕಲಿಸಬೇಕಾಗಿದೆ ಎಂದು ದೇಶಪಾಂಡೆ ಫೌಂಡೇಷನ್ನಿನ ಜಿಲ್ಲಾ ಶಿವರಾಜಕುಮಾರ್ ಜಿ. ಅವರು ವೃತ್ತಿ ತರಬೇತಿ ಬಗ್ಗೆ ಮಾಹಿತಿ ನೀಡಿದರು.

ನಗರದ ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ.ಅಂಬೇಡ್ಕರ್ ಕಲಾ ವಾಣಿಜ್ಯ ವಿಜ್ಞಾನ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ 'ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ನಿಯೋಜನೆ ಕೋಶವು ಆಯೋಜಿಸಿದ ಉದ್ಯೋಗ ಮಾಹಿತಿ ಸಮಾವೇಶದಲ್ಲಿ ಹುಬ್ಬಳ್ಳಿಯ ದೇಶಪಾಂಡೆ ಪೌಂಡೇಷನ್ ಸಂಚಾಲಕರಾದ ಶಿವರಾಜಕುಮಾರ್ ಜಿ. ಮತ್ತು ಪಲ್ಲವಿ ಜಿ. ಅವರು ಪಾಲ್ಗೊಂಡು ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿದ್ದಪ್ಪ ಎಸ್ .ಕಾಂತ ಅವರು ಮಾತನಾಡಿ ವಿದ್ಯಾರ್ಥಿಗಳು ಮುಂದೆ ನಿರುದ್ಯೋಗಿಗಳಾಗಬಾರದು ಎನ್ನುವ ಉದ್ದೇಶದಿಂದ ಉದ್ಯೋಗದ ಮಾಹಿತಿಯನ್ನು ಒದಲಿಸುವ ಕಾರಣಕ್ಕೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಐಕ್ಯೂಎಸಿ ಸಂಯೋಜಕರಾದ ಡಾ.ಸಿದ್ದಾರ್ಥ ಮದನರ್ಕ,ರ 'ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ನಿಯೋಜನೆ ಕೋಶದ ಸಂಚಾಲಕರಾದ ಡಾ.ಶಿವಕುಮಾರ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸುದರ್ಶನ ಮದನರ್ಕ,ರ ಡಾ.ಅರುಣ್ ಡಾ.ಅರುಣ್ ಕುಮಾ,ರ್ ಪ್ರೆ.ಕುಲಕರ್ಣಿ ಅವರು ಉಪಸ್ಥಿತರಿದ್ದರು. ಡಾ.ಶಿವಕುಮಾರ್ ಪ್ರಾಸ್ತಾವಿಕ ಮತ್ತು ಸ್ವಾಗತ ಮಾಡಿದರು.

ಒಳ್ಳೆಯ ಆಚಾರ ವಿಚಾರಗಳನ್ನು ಗೌರವಿಸುವುದೇ ಧರ್ಮ: ನಿಶ್ಚಲಾನಂದನಾಥ ಸ್ವಾಮೀಜಿ



ಕಲಬುರಗಿ:ಏ.25:ಬೆಂಗಳೂರಿನ ಮಲ್ಲತಳ್ಳಿಯಲ್ಲಿರುವ ವಾಸುದೇವ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿರುವವರಿಗೆ ಡಾ. ಹೆಚ್. ತುಕಾರಾಮ್ ತನ್ನ ತಂದೆ ಹೆಸರಿನಲ್ಲಿ ನೀಡುವ ''ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ'' ತಾಯಿಯ ಹೆಸರಿನಲ್ಲಿ ''ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ'' ಮತ್ತು ಸಹೋದರನ ಹೆಸರಿನಲ್ಲಿ ನೀಡುವ ''ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ'' ಯ ಪ್ರದಾನ ಸಮಾರಂಭವನ್ನು ಗಾನಪಲ್ಲವಿ ಆಡಿಟೋರಿಯಂನಲ್ಲಿ ಆಯೋಜಿಸಲಾಗಿತ್ತು.

2024ನೇ ಸಾಲಿನಲ್ಲಿ ಕಪಿಲ ಪಿ ಹುಮನಾಬಾದೆ ಅವರ ಕಥಾಸಂಕಲನ ''ಬಣಮಿ''ಗೆ ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿಯನ್ನು, ಮತ್ತು ಜಯಲಕ್ಷ್ಮಿ ಕೆ. ಅವರು ಬರೆದಿರುವ ''ಮತ್ತೆ ವಸಂತ'' ಕಥಾಸಂಕಲನಕ್ಕೆ ''ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ''ಯನ್ನು ಹಾಗೂ ಚಿತ್ರಕಲಾವಿದ ಮೊಹಮ್ಮದ್ ಇಸಾಕ್ ರವರಿಗೆ ''ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ''ಯನ್ನು ನೀಡಿ ಗೌರವಿಸಲಾಯಿತು.

2025 ನೇ ಸಾಲಿನಲ್ಲಿ ದೇವರಾಜು ಚನ್ನಸಂದ್ರ ಅವರು ಬರೆದಿರುವ ''ನೂರೆಂಟು ನೋವು'' ಕಾದಂಬರಿಗೆ ''ದಿವಂಗತ ಶ್ರೀ ಹೊಂಬಣ್ಣ ಪ್ರಶಸ್ತಿ'' ಯನ್ನು ಮತ್ತು ಶ್ರೀಮತಿ ವೀಣಾ ರಾವ್ ಬರೆದಿರುವ ''ಅಂಕುರಣ'' ಕಾದಂಬರಿಗೆ ''ದಿವಂಗತ ಶ್ರೀಮತಿ ಮುನಿಗಂಗಮ್ಮ ಪ್ರಶಸ್ತಿ'' ಯನ್ನು ಹಾಗೂ ಚಿತ್ರ ಕಲಾವಿದೆ ಲೋಚನ ಎನ್ ಕಾಳೇನಹಳ್ಳಿ ಅವರಿಗೆ ''ದಿವಂಗತ ವಾಸುದೇವ ಚಿತ್ರಕಲಾ ಪ್ರಶಸ್ತಿ''ಯನ್ನು ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪುರಸ್ಕೃತರಿಗೆ ಭಿನ್ನವಿತಳೆ ಮತ್ತು 5000 ನಗದು ಬಹುಮಾನವನ್ನು ನೀಡಿ ಸನ್ಮಾನಿಸಲಾಯಿತು

ಕಾರ್ಯಕ್ರಮದ ಉದ್ಘಾಟನೆಯನ್ನು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರು ನೆರವೇರಿಸಿ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವವರಿಗೆ ಗುರುತಿಸಿ ತನ್ನ ತಂದೆ ತಾಯಿ ಮತ್ತು ಸಹೋದರನ ಹೆಸರಿನಲ್ಲಿ ಡಾಕ್ಟರ್ ಹೆಚ್ ತುಕಾರಾಂ ರವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹೇಳಿದರು. ಮುಂದುವರೆದು ಧರ್ಮದ ಬಗ್ಗೆ ದೀರ್ಘವಾಗಿ ಮಾತನಾಡಿದರು ಮನುಷ್ಯರು ಒಬ್ಬರಿಗೊಬ್ಬರು ಎಲ್ಲರ ಆಚಾರ ವಿಚಾರಗಳನ್ನು ಗೌರವಿಸುವುದು, ಒಳ್ಳೆಯ ಕೆಲಸಗಳನ್ನು ನಿರ್ವಹಿಸುವುದೇ ಧರ್ಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ನಾರಾಯಣ ಘಟ್ಟ ರವರು ವಹಿಸಿದ್ದರು ಅವರು ಮಾತನಾಡುತ್ತಾ ಸಾಹಿತ್ಯ ಕೃಷಿಯಲ್ಲಿ ಮೌಲ್ಯಯುತವಾದದ್ದನ್ನು ಕಟ್ಟಿಕೊಡುವಲ್ಲಿ ಲೇಖಕ ಕವಿ ತನ್ನನ್ನು ತಾನು ದುಡಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಅಧೀಕ್ಷಕರು ಅಬಕಾರಿ ಇಲಾಖೆಯ ಕೆ. ಮೋಹನ್ ಅವರು ಡಾ. ಹೆಚ್. ತುಕಾರಾಮರವರ ತಂದೆ, ತಾಯಿ ಮತ್ತು ತಮ್ಮನ ನಡುವಿನ ಒಡನಾಟವನ್ನು ಹಂಚಿಕೊಡರು.

ಕನ್ನಡ ಅಧ್ಯಾಪಕರಾದ ಡಾ. ವಾಸುದೇವ ನಾಡಿಗ್ ಅವರು ಪ್ರಶಸ್ತಿಗಳ ಮಹತ್ವವನ್ನು ಮತ್ತು ಇತ್ತೀಚೆಗೆ ಹಣ ಕೊಟ್ಟು ಕೊಂಡುಕೊಳ್ಳುವ ಪ್ರಶಸ್ತಿಗಳ ಬಗ್ಗೆ ಮಾತನಾಡುತ್ತಾ ಇಂಥವರ ನಡುವೆ ಇಂತಹ ನಿಸ್ವಾರ್ಥ ಮನೋಭಾವದಿಂದ ನೀಡುತ್ತಿರುವ ಈ ಪ್ರಶಸ್ತಿಯು ನಮ್ಮನ್ನು ನಿಜಕ್ಕೂ ಪ್ರೇರೇಪಿಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದ ಉಪಸ್ಥಿತಿಯಿದ್ದ ಆಯೋಜಕರು ಹಾಗೂ ಲೇಖಕರಾದ ಡಾ. ಹೆಚ್. ತುಕಾರಾಂ ರವರು ಪ್ರಸ್ತಾವಿಕ ನುಡಿಗಳನ್ನಾಡಿದರು. ಕೃತಿಗಳ ಆಯ್ಕೆ ಕುರಿತು ಉದಂತ ಶಿವಕುಮಾರ್ ಮಾತನಾಡಿದರು. ದಮ್ಮಪ್ರಿಯ ಎಂ. ಗಿರಿಯಪ್ಪನವರು ಸ್ವಾಗತ ಮಾಡಿದರು, ರಂಗ ಕಲಾವಿದೆ ನಿರ್ಮಲನಾದನ್ ರವರು ನಿರೂಪಣೆ ಮಾಡಿದರು. ಗೋವಿಂದರಾಜ್ ಪಟೇಲ್ ರವರು ವಂದನಾರ್ಪಣೆ ಮಾಡಿದರು.



ಮಲೇರಿಯಾ ಬಗ್ಗೆ ಮುಂಜಾಗ್ರತೆ ಕ್ರಮ ವಹಿಸುವುದು ಅತ್ಯಗತ್ಯ

ಕಲಬುರಗಿ :ಏ.25:ಚಳಿ,ಜ್ವರ,ನಡುಕಇವುಗಳ ಮಲೇರಿಯಾದ ಪ್ರಮುಖ ಲಕ್ಷಣಗಳಾಗಿದ್ದು, ಇವುಗಳು ಕಂಡುಬದರೆನಿರ್ಲಕ್ಷ್ಯ ಮಾಡದೆ, ತಕ್ಷಣರಕ್ತ ಪರೀಕ್ಷೆ ಮಾಡಿಸಿ ಅದಕ್ಕೆ ಸೂಕ್ತವಾದಚಿಕಿತ್ಸೆ ಪಡೆದುಕೊಳ್ಳಬೇಕು. ಮಲೇರಿಯಾದ ಬಗ್ಗೆ ಭಯ ಪಡೆ, ಮುಂಜಾಗ್ರತೆ ವಹಿಸಿ ಎಂದುವೈದ್ಯಾಧಿಕಾರಿಡಾ.ಅನುಪಮಾಎಸ್.ಕೇಶ್ವಾರ ಸಲಹೆ ನಿಡಿದರು.

ನಗರದಶೇಖರೋಜಾದಲ್ಲಿರುವ ಶಹಾಬಜಾರ ನಗರ ಪ್ರಾಥಮಿಕಆರೋಗ್ಯಕೇಂದ್ರದಲ್ಲಿಬಸವೇಶ್ವರ ಸಮಾಜ ಸೇವಾ ಬಳಗದ ಸಹಯೋಗದೊಂದಿಗೆಶನಿವಾರಜರುಗಿದ ವಿಶ್ವಮಲೇರಿಯಾದಿನಾಚರಣೆಯಲ್ಲಿಅವರುಮಾತನಾಡುತ್ತಿದ್ದರು.

ಸೋಂಕಿತಅನಾಫಿಲೀಸ್ ಸೊಳ್ಳೆ ಕಚ್ಚುವುದರಿಂದ ಮಲೇರಿಯಾಕಾಯಿಲೆ ಬರುತ್ತದೆ. ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಮನೆ ಸುತ್ತ ನೀರು ಸಂಗ್ರಹವಾಗದತೆ ನೋಡಿಕೊಂಡು ಸ್ವಚ್ಛತೆಯನ್ನುಕಾಪಾಡುವುದು, ನೀರಿನ ಸಂಗ್ರಹಗಳನ್ನು ಭದ್ರವಾಗಿಮುಚ್ಚಿಡುವುದು, ಸೊಳ್ಳೆ ಪರದೆ ಮತ್ತುನಿರೋಧಕಗಳನ್ನು ಬಳಸುವುದು, ಕಾಯಿಸಿ, ಆರಿಸಿದ ಶುದ್ಧವಾದ ನೀರನ್ನುಕುಡಿಯುವುದು, ಸಮತೋಲಿತಆಹಾರವನ್ನು ಸೇವಿಸುವುದು, ಮಳೆಯಲ್ಲಿ ನೆನೆಯದಂತೆ ಲಕ್ಷ್ಯವಹಿಸುವುದು ಸೇರಿದಂತೆ ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವದರ ಮೂಲಕ ಮಲೇರಿಯಾ ಕಾಯಿಲೆ ಬರದಂತೆತಡೆಯಬಹುದಾಗಿದೆಎದು ಅನೇಕ ಮುಂಜಾಗ್ರತಾ ಕ್ರಮಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಆರೋಗ್ಯಕೇಂದ್ರದ ಸಿಬ್ಬಂದಿಗಳಾದ ಜಗನಾಥಗುತ್ತೇದಾರ, ಗಂಗಾಜ್ಯೋತಿಗಜಿ, ರೇಶ್ಮಾ ನಕ್ಕುಂದಿ, ಅರ್ಚನಾ ಸಿಂಗೆ, ಮಂಗಲಾ ಚಂದಾಪುರೆ, ಚಂದ್ರಕಲಾ ಮಠಪತಿ, ಮರಲಿಂಗಮ್ಮ ಭಾವಿಮನಿ, ಶ್ರೀದೇವಿ ಸಾಗರ, ಕಾರ್ತಿಕ ನಕ್ಕುಂದಿ ಸೇರಿದಂತೆ ಮತ್ತಿತರರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಒಂದನೇಯ ಪುಟದಿಂದ

ಸಂವಿಧಾನದಡಿಯಲ್ಲಿ ಸಮುದಾಯ ಕಟ್ಟುವ ಕೆಲಸವಾಗಲಿ: ಡಾ. ರಝಾಕ್ ಉಸ್ತಾದ್ ಕರೆ

ಬಾಲಪ್ಪ ಹಳ್ಳಿಹೊಸೂರು, ಗುರುದೇವ್, ವಿರುಪಾಕ್ಷಿ ಅತ್ತನೂರ್, ಜಾವೀದ್, ಶರಣಬಸವ, ಸಾಬಣ್ಣ, ಚನ್ನಬಸವ ಕಡದಿನ್ನಿ, ಸುಂದರ್, ಮಾರೆಪ್ಪ ಗುಡದಿನ್ನಿ ಸೇರಿದಂತೆ ನೂರಾರು ಯುವಕರು ಭಾಗವಹಿಸಿದ್ದರು.

ಅಮೃತ ನೆರಳಿನಲ್ಲಿ ಅಮೃತವೇ ಮಾಯ...

ಗಳಿಗೆ ಮಧ್ಯಪಾನ, ಗುಟ್ಕಾ ಸಿಗರೇಟ್ ಹಾಗೂ ಇನ್ನಿತರ ಅನೈತಿಕ ಚಟುವಟಿಕೆ ನಡೆಸುವಂತ ನೆರಳಾ ಗಿದೆ, ಇಲ್ಲಿ ಇಟ್ಟಿರುವ ಬಿಂದಿಗೆಗಳಲ್ಲಿ ಒಂದು ಹನಿ ನೀರೂ ಇಲ್ಲ, ಸಿಬ್ಬಂಧಿಯಂತೂ ಮೊದಲೇ ಇಲ್ಲ, ಇದರ ಲಾಭ ಯಾರು ಪಡೆದುಕೊಂ ಡಿದಾರೋ ಆ ಗಂಗಾಮಾತೆಗೇ ಗೊತ್ತು ಆದರೆ ಸರಕಾರಕ್ಕಂತೂ ನಷ್ಟವಾಗಿದೆ ಆದಕಾರಣ ಇದನ್ನು ಬೇಗ ಸಿದ್ದಗೊಳಿಸಬೇಕೆಂಬುದೇ ಸಾರ್ವಜನಿಕರ ಮನವಿಯಾಗಿದೆ ಎಂದು ಹೇಳಿದರು.

3ಕೊ..89 ನಾನಾ ಅಭಿವೃದ್ಧಿ ಕಾಮಗಾರಿಗೆ ಸಚಿವರು ಭೂಮಿಪೂಜೆ ಎಲ್ಲಾ ಸಮಾಜದ ಅಭಿವೃದ್ಧಿಗೆ ಅನುದಾನ -ಬೋಸರಾಜು

ಶಾದಿ ಮಹಲ್ ಕಾಮಗಾರಿಗಳಿಗೆ ಭೂಮಿಪೂಜೆ ಮಾಡಲಾಗಿದೆ. ಸಾವ ರ್ಜನಿಕರು ಕಾಮಗಾರಿ ನಡೆಸುವ ವರಿಗೆ ಸಹಕಾರ ನೀಡಬೇಕು. ಮುಂದಿನ ದಿನಗಳಲ್ಲಿ ಇನ್ನೂಳಿದ ಸಮುದಾಯಗಳಿಗೆ ಅನುದಾನ ನೀಡಲಾಗುವುದು

ಗುತ್ತೆಗೆದಾರರು ಸಹ ಅವಧಿ ಯೊಳಗಡೆ ಕಾಮಗಾರಿ ಮುಗಿಸಿ ಜನರಿಗೆ ಅನುಕೂಲ ಮಾಡಿಕೊಡ'ಬೇಕು, ಎಂದು ಹೇಳಿದರು.

ಶಾಸಕ ಹಂಪಯ್ಯ ನಾಯಕ ಮಾತನಾಡಿ ಸಚಿವರ ಮಾರ್ಗದರ್ಶ ನದಲ್ಲಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತಿದ್ದೇನೆ. ಕ್ಷೇತ್ರದಲ್ಲೆಡೆ

ಅವಶ್ಯ ಮೂಲಭೂತ ಸೌಲಭ್ಯ ಗಳನ್ನು ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನೀಡಲಾಗುವುದು. ಎಂದರು.


ಈ ಸಂದರ್ಭದಲ್ಲಿಚುಕ್ಕಿ ಸೂಗಪ್ಪ ಸಾಹುಕಾರ, ಬ್ರಿಜೇಶ ಪಾಟೀಲ್, ಎಂ.ಶ್ರೀನಿ ವಾಸ, ದಾನನಗೌಡ, ಚುಕ್ಕಿ ಶಿವಕುಮಾರ, ವ.ಪಂ.ಅಧ್ಯಕ್ಷ ಹಾಜಿಚೌದ್ರಿ, ರಮೇಶ ದರ್ಶನಕರ, ಚಂದ್ರು ಕಳಸ, ಶಿವಶರಣ ಆರಿಕೇರಿ, ಪ.ಪಂ. ಮಾಜಿ ಅಧ್ಯಕ್ಷ ವೈ.ಭೂಪನ ಗೌಡ, ರೇಣುಕಾ, ಪ.ಪಂ.ಸದಸ್ಯ ರಾದ ಸೂರಿ ದುರಗಣ್ಣ ನಾಯಕ, ಮೌಲಾ ಸಾಬ್ ವರ್ಚಸ್, ಮಾರ್ಕಪ್ಪ, ಹಸೇನಲಿಸಾಬ್, ಚನ್ನಪ್ಪ ಗಡ್ಡ, ಚನ್ನಬಸವ ದೇವರಮನೆ, ಕಲ್ಲೂರು ಬಸವರಾಜ ನಾಯಕ, ಹೆಚ್.ಕೆ. ಅಮರೇಶ, ಕೆಕೆಆರ್ಐ ಡಿಎಲ್ ಎಇಇ ಹನುಮಂತಪ್ಪ, ತಾ.ಪಂಇಒ ಶಶಿಧರಸ್ವಾಮಿ ಸೇರಿ ಇತರರಿದ್ದರು.

ಅರಿವಿನ ಗವಿಯಲ್ಲಿ ಅಪ್ಪಣ್ಣನವರ ಮೂರ್ತಿ ಪುನಃ ಪ್ರತಿಷ್ಠಾಪನೆಗೆ ಒತ್ತಾಯಿಸಿ ಸಚಿವರಿಗೆ ಮನವಿ

ಅಪ್ಪಣ್ಣನವರ ಅರಿವಿನ ಗುಹೆ ಮುಂದೆ ಹಾಕಿದ ನಾಮಫಲಕವನ್ನು ಸಹ ಕೆಲವರು ರಾತ್ರೋರಾತ್ರಿ ಕಿತ್ತಿ ಹಾಕಿದ್ದಾರೆ. ಇದಕ್ಕೆ ಇನ್ನೊಂದು ಕಾರಣ ಏನೆಂದರೆ, ಹಡಪದದವರನ್ನು ಮೊದಲಿನಿಂದಲೂ ಕನಿಷ್ಠರು ಎಂದು ಸಮಾಜವು ಕಾಣುತ್ತ ಬಂದಿರುವುದು ಒಂದು ಕಾರಣವಾಗಿರಬಹುದು. ಹಡಪದ ಅಪ್ಪಣ್ಣನವರ ವಂಶಸ್ಥರು ಮತ್ತು ಸಮಾಜದ ಭಕ್ತಾರಾದ ನಾವು ನಮ್ಮ ಶರಣರ ಇತಿಹಾಸ ಹಾಗೂ ಅರಿವಿನ ಗವಿಯನ್ನು ಕಳೆದುಕೊಳ್ಳುವ ಪ್ರಶ್ನೆಯೇ ಇಲ್ಲ. ವರ್ತಮಾನ ಪರಿಸ್ಥಿತಿ ನಮ್ಮ ಭಾವನೆಗಳ ಗಂಭೀರವಾಗಿ ಧಕ್ಕೆ ಉಂಟು ಮಾಡಿದೆ ಸಮಾಜದ ಮುಖಂಡರು ಭಕ್ತರು ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಪ್ರತಿಭಟನೆಗಳನ್ನು ಕೂಡ ನಡೆಸಲಾಗಿದೆ ಅನೇಕ ಮಠಾಧೀಶರು ವಿಶೇಷ ಭಾಲ್ಕಿಯ ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಹಾಗೂ ಅನೇಕ ನಾಯಕರು ಹೋರಾಟ ನಡೆಸಿದರು

ಇನ್ನೂ ನ್ಯಾಯ ದೊರಕಿಲ್ಲ. ಆದ್ದರಿಂದ ತಾವು ಅಕ್ರಮದಲ್ಲಿ ಭಾಗಿಯಾದ ಪಂಚ ಕಮಿಟಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತಕ್ಷಣ ಸೂಕ್ತ ಕ್ರಮ ಕೈಗೊಂಡು ಯಥಾಸ್ಥಿತಿಗೆ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಆ ಸ್ಥಳವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಿ ನಮ್ಮ ತಂಗಡಿಗಿ ಪೂಜ್ಯರಾದ ಶ್ರೀ ಶ್ರೀ ಅನ್ನದಾನಿ ಭಾರತೀಯ ಅಪ್ಪಣ್ಣ ಮಹಾಸ್ವಾಮಿಗಳನ್ನು ಅಲ್ಲಿನ ಪ್ರಾಧಿಕಾರದ ಸದಸ್ಯರನ್ನಾಗಿ ಮಾಡಿಕೊಂಡು ಸಮರ್ಪಕವಾಗಿ ಅಭಿವೃದ್ದಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಸಮಾಜದ ಜಿಲ್ಲಾದ್ಯಕ್ಷ ಬಸವರಾಜ ಹರವಿ, ಕಾರ್ಯಾಧ್ಯಕ್ಷ ಚಂದ್ರಶೇಖರ ಹಡಪದ, ಮುಖಂಡರಾದ ಬಸವರಾಜ ಭಾಗ್ಯನಗರ, ಅಯ್ಯಪ್ಪ, ಶರಣಬಸವ ನಗನೂರ, ದೇವಪ್ಪ ಎಲಗಟ್ಟಿ, ಆಮರೇಶ ತೊಪ್ಪಲ ದೊಡ್ಡಿ, ಬಸವರಾಜ ಬೂದೂರು, ಶರಣಬಸವ ಹೀರಾ, ಶಿವಕುಮಾರ , ವೆಂಕಟೇಶ ಮಲ್ಲಟ, ವೀರೇಶ, ಯಮುನಪ್ಪ, ನಿಂಗಪ್ಪ ಪೂಜಾರಿ ಸೇರಿದಂತೆ ಇತರರು ಇದ್ದರು.

ಹಿಂಸಾಚಾರಕ್ಕೆ ಸ್ಥಾನವಿಲ್ಲ: ಟ್ರಂಪ್ ಮೇಲಿನ ದಾಳಿ ಖಂಡಿಸಿದ ಮೋದಿ



ನವದೆಹಲಿ: ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ಪ್ರಮುಖ ಗಣ್ಯರು ಭಾಗವಹಿಸಿದ್ದ ಶ್ವೇತ ಭವನ ವರದಿಗಾರರ ಔತಣಕೂಟದಲ್ಲಿ ಶನಿವಾರ ರಾತ್ರಿ ನಡೆದ ಗುಂಡಿನ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಖಂಡಿಸಿದ್ದಾರೆ.

ಅಮೆರಿಕ ಅಧ್ಯಕ್ಷರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ನಡೆದ ಗುಂಡಿನ ದಾಳಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ, ಘಟನೆಯನ್ನು ಖಂಡಿಸಿದ್ದಾರೆ.

ವಾಷಿಂಗ್ಟನ್ ಡಿಸಿ ಹೋಟೆಲ್‌ನಲ್ಲಿ ನಡೆದ ಭದ್ರತಾ ಲೋಪದ ಬಳಿಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪತ್ನಿ ಮೆಲಾನಿಯಾ ಮತ್ತು ಯುಎಸ್ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಸುರಕ್ಷಿತವಾಗಿದ್ದಾರೆ ಎಂದು ತಿಳಿದು ನಿರಾಳವಾಗಿದ್ದೇನೆ. ಅವರ ಸುರಕ್ಷತೆ ಹಾಗೂ ಆರೋಗ್ಯಕ್ಕಾಗಿ ಹಾರೈಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ. ಮತ್ತು ಹಿಂಸಾಚಾರವನ್ನು ಸ್ಪಷ್ಟವಾಗಿ ಖಂಡಿಸಬೇಕು ಎಂದು ಮೋದಿ ಎಕ್ಸ್ ಪೋಸ್ಟ್ ನಲ್ಲಿ ಬರೆದುಕೊಂಡಿದ್ದಾರೆ.

ಗುಂಡಿನ ದಾಳಿ ಮಾಡಿದ ವ್ಯಕ್ತಿ ಅರೆಸ್ಟ್: ಶನಿವಾರ ರಾತ್ರಿ ವಾಷಿಂಗ್ಟನ್ ಹಿಲ್ಟನ್ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಶ್ವೇತಭವನದ ವರದಿಗಾರರ ವಾರ್ಷಿಕ ಔತಣಕೂಟದ ಸಮಯದಲ್ಲಿ ಕ್ಯಾಲಿಫೋರ್ನಿಯಾದ ಟೊರೆನ್ಸ್ ನ 31 ವರ್ಷದ ಕೋಲ್ ಥಾಮಸ್ ಅಲೆನ್ ಎಂಬಾತ ಏಕಾಏಕಿ ನುಗ್ಗಿ ಗುಂಡಿನ ದಾಳಿ ಮಾಡಿದ್ದ. ಈ ಕಾರ್ಯಕ್ರಮದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅವರ ಪತ್ನಿ ಮೆಲಾನಿಯಾ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಸೇರಿದಂತೆ ಗಣ್ಯ ಪತ್ರಕರ್ತರು ಇಲ್ಲಿ ಉಪಸ್ಥಿತರಿದ್ದರು.

ತಕ್ಷಣವೇ ಟ್ರಂಪ್ ಸೇರಿದಂತೆ ಗಣ್ಯರನ್ನು ಸುರಕ್ಷಿತ ಸ್ಥಳಕ್ಕೆ ಭದ್ರತಾ ಸಿಬ್ಬಂದಿ ರವಾನಿಸಿದ್ದರು. ಇನ್ನು ಭದ್ರತಾ ಪಡೆ ತ್ವರಿತ ಕಾರ್ಯಾಚರಣೆ ನಡೆಸಿ, ಶಂಕಿತ ದಾಳಿಕೋರನನ್ನು ಬಂಧಿಸಿದ್ದರು. ಬಂಧಿತನನ್ನು ಕ್ಯಾಲಿಫೋರ್ನಿಯಾದ ಟೊರೆನ್ಸ್ ನ 31 ವರ್ಷದ ಕೋಲ್ ಥಾಮಸ್ ಅಲೆನ್ ಎಂದು ಗುರುತಿಸಲಾಗಿದೆ. ಈ ಬೆನ್ನಲ್ಲೇ ಟ್ರಂಪ್ ಅವರು ತಮ್ಮ ಟ್ರುತ್ ಸೋಷಿಯಲ್ ಖಾತೆಯಲ್ಲಿ ಬಂದೂಕುಧಾರಿಯ ಚಿತ್ರ ಮತ್ತು ದಾಳಿಯ ವಿಡಿಯೋ ಹಂಚಿಕೊಂಡಿದ್ದರು.

ಗುಂಡಿನ ಶಬ್ದ ಕೇಳಿಬಂದ ಬೆನ್ನಲ್ಲೇ ಹಲವರು ಗಣ್ಯರು ಮತ್ತು ಪತ್ರಕರ್ತರು ಮೇಜಿನ ಕೆಳಗೆ ಕುಳಿತುಕೊಂಡಿರುವುದು ಮತ್ತು ಟ್ರಂಪ್ ಅವರನ್ನು ಭದ್ರತಾ ಪಡೆ ಸುತ್ತುವರೆದು ಕರೆದೊಯ್ಯುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಇನ್ನು ಹೋಟೆಲ್ ನಲ್ಲಿ ಮತ್ತು ಸುತ್ತಮುತ್ತ ಭದ್ರತಾ ಪಡೆ ಸುತ್ತುವರಿದಿದ್ದು, ಪ್ರವೇಶ ನಿರ್ಬಂಧಿಸಲಾಗಿತ್ತು. ಆ ಬಳಿಕ ಪ್ರತಿಕ್ರಿಯೆ ನೀಡಿದ್ದ ಟ್ರಂಪ್, ನಾವು ಸುರಕ್ಷಿತವಾಗಿದ್ದೇವೆ ಎಂದು ತಿಳಿಸಿದ್ದರು.

ಪ.ಪಂಚಾಯತಿ ಪ್ರಭಾರಿ ಮುಖ್ಯಧಿಕಾರಿ ಅಶೋಕ ಪವಾರ ಅದಿಕಾರ ಸ್ವಿಕಾರ



ಸಿರವಾರ.ಏ.25- ಸಿರವಾರ ಪಟ್ಟಣ ಪಂಚಾಯತಿ ಪ್ರಭಾರಿ ಮುಖ್ಯಾದಿಕಾರಿಯಾಗಿ ತಹಸೀಲ್ದಾರ ಅಶೋಕ ಪವಾರ ಅದಿಕಾರ ಸ್ವಿಕಾರ ಮಾಡಿಕೊಂಡರು. ಈ ಹಿಂದೆ ಮುಖ್ಯಾದಿಕಾರಿಯಾಗಿದ ಸುರೇಶ ಶೇಟ್ಟಿಯವರು ಲೋಕಾಯುಕ್ತ ಬಲೆಗೆ ಬಿದ್ದ ಪರಿಣಾಮ ಕಳೆದ 15 ದಿನಗಳಿಂದ ಆ ಸ್ಥಾನ ತೆರವಾಗಿತು.

ಆಡಳಿತದ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಸಿರವಾರ ತಹಸೀಲ್ದಾರ ಅಶೋಕಪವಾರ ಅವರನ್ನು ಆಡಳಿತಾದಿಕಾರಿಯಾಗಿ ನೇಮಕ ಮಾಡಿದ ಹಿನ್ನೆಲೆಯಲ್ಲಿ ಶುಕ್ರವಾರ ಅದಿಕಾರ ಸ್ವಿಕಾರ ಮಾಡಿಕೊಂಡರು. ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯ ಪಾಟೀಲ್, ಸಿಬ್ಬಂದಿಗ ಳಾದ ಪದ್ಮಾ, ಲಕ್ಷ್ಮೀ, ಸುನೀತ ಸಜ್ಜನ್, ಬೀಮರಾವ್ ಸುಧಾಕರ ಸೇರಿದಂತೆ ಇನ್ನಿತರರು ಇದರು.

ಎಸ್ ಎಸ್ ಎಲ್ ಸಿ ಪರೀಕ್ಷೆ ಫಲಿತಾಂಶ ಸಿರುಗುಪ್ಪ ಕ್ಷೇತ್ರ ಬಳ್ಳಾರಿ ಜಿಲ್ಲೆಗೆ ಎರಡನೇ ಸ್ಥಾನ ಶುಭ ಹಾರೈಕೆ - ಶಾಸಕ ಬಿ.ಎಂ.ನಾಗರಾಜ



ಸಿರುಗುಪ್ಪ-ಎಸ್ ಎಸ್ ಎಲ್ ಸಿ ಪರೀಕ್ಷೆ ಫಲಿತಾಂಶ ಪ್ರಕಟವಾದ ಸಿರುಗುಪ್ಪ ಕ್ಷೇತ್ರ ಬಳ್ಳಾರಿ ಜಿಲ್ಲೆಗೆ ಎರಡನೇ ಸ್ಥಾನ ಶೇಕಡ 93.99 ಫಲಿತಾಂಶ ಪ್ರಕಟವಾದ ಹಿನ್ನೆಲೆಯಲ್ಲಿ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ ಎಂ ನಾಗರಾಜ ಅವರನ್ನು ಭೇಟಿಯಾದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಗುರಪ್ಪ, ಕ್ಷೇತ್ರ ಸಮನ್ವಯಾಧಿಕಾರಿ ತಮ್ಮನ ಗೌಡ ಪಾಟೀಲ್, ಸಿಆರ್‌ಪಿ ಮಾರುತಿ, ಶಿಕ್ಷಣ ಇಲಾಖೆ ಅಧಿಕಾರಿಗಳು, ನಗರಸಭೆ ಮಾಜಿ ಸದಸ್ಯ ಹೆಚ್.ಗಣೇಶ ಫಲಿತಾಂಶದ ಬಗ್ಗೆ ವಿವರಣೆ ನೀಡಿದ ಅವರು ಈ ಸಂದರ್ಭದಲ್ಲಿ ಶಾಸಕ ಬಿ ಎಂ ನಾಗರಾಜ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅವರ ದೊರೆತ ಗೌರವಕ್ಕೆ ಅಭಿನಂದಿಸಿ ಶುಭ ಹಾರೈಸಿ ಈ ಫಲಿತಾಂಶ ಬರಲು ಕಾರಣಕರ್ತರಾದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಕಿಯರು ವೃಂದದವರಿಗೆ ಗೌರವಿಸಿ ಅಭಿನಂದಿಸಿ ಕೃತಜ್ಞತೆ ಸಲ್ಲಿಸಿದರು



ಹಿಂದೂ ಮಸ್ಕಿ ತಾಲೂಕಿನ ನಂಜಲದಿನ್ನಿ ಗ್ರಾಮದಲ್ಲಿ ಜರುಗಿದ ಶ್ರೀ ಬೀರಲಿಂಗೇಶ್ವರ ದೇವರ ಶೀಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆ. ನೂತನ ದೇವಾಲಯ ಲೋಕಾರ್ಪಣೆ ಮತ್ತು ಸಾಮೂಹಿಕ ವಿವಾಹ ಹಾಗೂ ಅಗ್ನಿ ಮಹೋತ್ಸವದ ಉದ್ಘಾಟಕರಾಗಿ. ಮಾಜಿ ಸಂಸದರಾದ ಶ್ರೀ ಕೆ ವಿರುಪಾಕ್ಷಪ್ಪನವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಕಾರ್ಯಕ್ರಮದ ಪಾವನ ಸಾನಿಧ್ಯವನ್ನು. ಪರಮಪೂಜ್ಯ ಶ್ರೀ ಮಾದಯ್ಯ ಗುರುವಿನ್

ಪೀಠಾದಿಪಥಿಗಳು ಅಮೋಘ ರೇವಣಸಿದ್ದೇಶ್ವರ ಮಠ ತುರುವಿಹಾಳ. ಚಿದಾನಂದಯ್ಯ ಗುರುವಿನ್. ಗಂಗಾಧರ್ ಗುರುವಿನ್ ಹಾಗೂ. ಹಾಲುಮತ ಸಮಾಜದ ಹರ ಗುರು ಚರಮೂರ್ತಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಪ್ರತಾಪ್ ಗೌಡ ಪಾಟೀಲ್. ಹಾಗೂ ಇತರರು ಉಪಸ್ಥಿತರಿದ್ದರು.



ತುಂಗಭದ್ರಾ ಡ್ಯಾಮ್ ಎಲ್ಲಾ ಹೊಸದಾಗಿ 33 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಪೂರ್ಣ

ಸಿರುಗುಪ್ಪ,ಏ.25-

ವಿಜಯನಗರದ ಹೊಸಪೇಟೆ ತುಂಗಭದ್ರಾ ಜಲಾಶಯದಲ್ಲಿ ಹೊಸದಾಗಿ ಎಲ್ಲಾ 33 ಕ್ರಸ್ಟ್ ಗೇಟ್ ಗಳ ಅಳವಡಿಕೆ ಶನಿವಾರ ಪೂರ್ಣಗೊಂಡಿದೆ 2024 ಆ. 10 ರಂದು ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕೊಂಡಿ ಕಳಚಿ ಅಪಾರ ಪ್ರಮಾಣದ ನೀರು ನದಿ ಪಾಲಾಗಿತ್ತು 19ನೇ ಕ್ರಸ್ಟ್ ಗೇಟ್ ಸೇರಿ ಎಲ್ಲಾ 33 ಕ್ರಸ್ಟ್ ಗೇಟ್ ಗಳನ್ನು ಹೊಸದಾಗಿ ಅಳವಡಿಸುವ ಕಾರ್ಯ 2025 ರ ಡಿಸೆಂಬರ್ 24 ರಿಂದ ಆರಂಭಿಸಲಾಗಿತ್ತು ಹಲವು ಸವಾಲುಗಳ ಮಧ್ಯೆಯೂ 121 ದಿನಾ ನಿರಂತರ ಕೆಲಸ ನಿರ್ವಹಿಸುವ ಮೂಲಕ 33 ಕ್ರಸ್ಟ್ ಗೇಟ್ ಗಳ ಅಳವಡಿಕೆಗೆ ತಜ್ಞರು ಅಧಿಕಾರಿಗಳು ಕಾರ್ಮಿಕರು ಶ್ರಮಿಸಿದ್ದರು ವೆಲ್ಡಿಂಗ್ ಮತ್ತು ಪೇಂಟಿಂಗ್ ಸೇರಿ ಸಣ್ಣಪುಟ್ಟ ಕೆಲಸಗಳನ್ನು ಮೇ 15 ರೊಳಗೆ ಮುಗಿಸುವ ವಿಶ್ವಾಸವನ್ನು ಅಧಿಕಾರಿಗಳು ಹೊಂದಿದ್ದಾರೆ ಪ್ರಕಟಣೆ ತಿಳಿಸಿದೆ ಎಂದು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಅವರು ತಿಳಿಸಿದ್ದಾರೆ.

ಅಭಿವೃದ್ಧಿಯಲ್ಲಿ ದೂರವಾಣಿಯ ಪಾತ್ರ ಪ್ರಮುಖವಾದದ್ದು

ಕಲಬುರಗಿ,ಏ.25

ದೂರವಾಣಿಯು ಅದೊಂದು ಕೇವಲ ಮಾತನಾಡುವ ಸಾಧನವಾಗಿರದೆ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಮೂಲಾಧಾರವಾಗಿದೆ. ದೂರದಲ್ಲಿರುವ ವ್ಯಕ್ತಿಗಳೊಂದಿಗೆ ನೇರವಾಗಿ ಮಾತನಾಡಲು ಮತ್ತು ಸಂವಹನ ನಡೆಸಲು ಇದು ಸಹಾಯ ಮಾಡುತ್ತದೆ, ಇದರಿಂದ ಮಾಹಿತಿ ವಿನಿಮಯ ವೇಗವಾಗುತ್ತದೆ. ವ್ಯಾಪಾರ ಮತ್ತು ವಾಣಿಜ್ಯ ವಹಿವಾಟುಗಳನ್ನು ಸುಗಮಗೊಳಿಸುವ ಮೂಲಕ ದೂರವಾಣಿಯು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ನಗರದ ಖಾದ್ರಿ ಚೌಕ್ ಸಕ್ಸಸ್ ಕಂಪ್ಯೂಟರ ತರಬೇತಿ ಸಂಸ್ಥೆಯಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದಿಂದ ಜರುಗಿದ ರಾಷ್ಟ್ರೀಯ ದೂರವಾಣಿ ದಿನಾಚರಣೆಯನ್ನು ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಇಂದು ಮೊಬೈಲ್ ಕ್ರಾಂತಿಯ ಮೂಲಕ ಮೊಬೈಲ್‌ಗಳು ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಿದ್ದು, ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗೆ ಕಾರಣವಾಗಿವೆ. ದೂರವಾಣಿ ವಲಯವು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಮತ್ತು ಗ್ರಾಮೀಣ ಪ್ರದೇಶಗಳನ್ನು ಮುಖ್ಯ ವಾಹಿನಿಯೊಂದಿಗೆ ಸಂಪರ್ಕಿಸುತ್ತದೆ. ಕರ್ನಾಟಕದಂತಹ ರಾಜ್ಯಗಳಲ್ಲಿ ಎಕ್ಸ್‌ಚೇಂಜ್‌ಗಳ ಹೆಚ್ಚಳ ಮತ್ತು ಮೊಬೈಲ್ ಬಳಕೆಯು ಮಾಹಿತಿ ತಂತ್ರಜ್ಞಾನದಲ್ಲಿ ಭಾರಿ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಕರಾವಿಪ ಗ್ರಾಮೀಣ ಘಟಕದ ಮಾಜಿ ಸಂಚಾಲಕ ಶಿವಯೋಗೆಪ್ಪಾ ಎಸ್.ಬಿರಾದಾರ, ಶಿಕ್ಷಕಿಯರಾದ ಶಿಕ್ಷಕಿಯರಾದ ಪೂಜಾ ಹೂಗಾರ, ಸ್ನೇಹಾ ಚೌಹಾಣ, ಮುಸ್ಕಾನ್ ಶೇಖ್, ರುಕ್ಸಾನಾ ಪಟೇಲ್ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿ ದಿನ ಹಾಗೂ ಅಂತಾರಾಷ್ಟ್ರೀಯ ಚರ್ನೋಬಿಲ್ ದುರಂತ ಸ್ಮರಣೆ ದಿನ

ಸಂಜೆ ಜ್ವಾಲೆ



ಸಿರುಗುಪ್ಪ- ಉತ್ತಮ ಪುಸ್ತಕಗಳನ್ನು ಓದುವುದಂದರೆ ಅದು ಶ್ರೇಷ್ಠ ವ್ಯಕ್ತಿಗಳೊಂದಿಗೆ ಸಂಭಾಷಣೆ ನಡೆಸಿದಂತೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಲೋಕ ಶಿಕ್ಷಣ ಸಾಕ್ಷರತಾ ಶಾಂತಿ ಸಭೆ ಸದಸ್ಯರು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಅವರು ಅಭಿಪ್ರಾಯಪಟ್ಟರು ಸಿರುಗುಪ್ಪ ನಗರದ ಇಬ್ರಾಹಿಂ ಮಂಜಿಲ್ ನಲ್ಲಿ ಅಂತರಾಷ್ಟ್ರೀಯ ಬೌದ್ಧಿಕ ಆಸ್ತಿ ದಿನ ಹಾಗೂ ಅಂತಾರಾಷ್ಟ್ರೀಯ ಚರ್ನೋಬಿಲ್ ದುರಂತ ಸ್ಮರಣೆ ದಿನವನ್ನು ನೆನಪಿಸಿ ಸ್ಮರಿಸಿ ಮಾತನಾಡುತ್ತಾ ಪ್ರತಿ ವರ್ಷ ಏಪ್ರಿಲ್ 26 ರಂದು ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿ ದಿನವನ್ನಾಗಿ ಆಚರಿಸಲಾಗುತ್ತದೆ ಯಾವುದೇ ಬಗೆಯ ಉತ್ಪನ್ನಗಳ ಹಕ್ಕುಗಳನ್ನು ರಕ್ಷಿಸುವ ಪೇಟೆಂಟ್ ಕಾಪಿರೈಟ್ ಟ್ರೇಡ್ ಮಾರ್ಕ್ ಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶವಾಗಿದೆ ಮತ್ತು 1986 ರಲ್ಲಿ ಮಾನವ ಕುಲವೇ ಬೆಚ್ಚಿ ಬೀಳುವ ಚಿರ್ನೋಬಿಲ್ ಅಣು ದುರಂತ ಸೋವಿಯತ್ ಒಕ್ಕೂಟದಲ್ಲಿ ಸಂಭವಿಸಿತು ಇದರ ಸ್ಮರಣಾರ್ಥ ಏ. 26 ರಂದು ಅಂತರಾಷ್ಟ್ರೀಯ ಚಿರ್ನೋ ಬಿಲ್ ದುರಂತ ಸ್ಮರಣೆ ದಿನವನ್ನಾಗಿ ವಿಶ್ವಸಂಸ್ಥೆ ಘೋಷಿಸಿದೆ ಚೇರ್ನೋ ಬಿಲ್ ಪರಮಾಣು ಘಟಕದಲ್ಲಿನ ಸೋರಿಕೆ ಸಂಭವಿಸಿ ಆಸುಪಾಸಿನ ಮೂರು ದೇಶಗಳನ್ನು ಒಳಗೊಂಡು 80 ಲಕ್ಷಕ್ಕೂ ಅಧಿಕ ಮಂದಿ ವಿಕಿರಣಕ್ಕೆ ತುತ್ತಾದರು ವಿಕಿರಣದಿಂದ ದೀರ್ಘಕಾಲಿಕ ಆರೋಗ್ಯ ಸಮಸ್ಯೆಗಳಿಂದ ಜನರು ನೆರಳುವಂತಾಯಿತು ಎಂದು ಸಮಾಜ ಸುಧಾರಕ ಅಬ್ದುಲ್ ನಬಿ ಅವರು ವಿವರಿಸಿ ಹೇಳಿದರು.

ಸಿರ್ಸಿ ಎ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಡಾ. ಶೈಲೇಂದ್ರ ಬೆಲ್ದಾಳೆ



ಬೀದರ್ :ಏ.24: ನಮ್ಮ ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನಮ್ಮ ಪ್ರಮುಖ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಆಗಬೇಕಾದರೆ ಮೂಲಭೂತ ಸೌಕರ್ಯಗಳು ಬಲವಾಗಿರಬೇಕು. ಈ ನಿಟ್ಟಿನಲ್ಲಿ ರಸ್ತೆ, ನೀರು, ವಿದ್ಯುತ್, ಸಮುದಾಯ ಭವನ ಸೇರಿದಂತೆ ಅನೇಕ ಕಾಮಗಾರಿಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಸಿರ್ಸಿ (ಎ) ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನನ್ನ ಸೇವೆ ಜನಪರವಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಗ್ರಾಮಗಳ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಪ್ರತಿಯೊಂದು ಗ್ರಾಮವೂ ಮಾದರಿ ಗ್ರಾಮವಾಗಬೇಕು ಎಂಬುದು ನನ್ನ ಆಶಯ ಎಂದು ತಿಳಿಸಿದರು.

ಇಂದು ನಮ್ಮ ಕ್ಷೇತ್ರದ ಅಭಿವೃದ್ಧಿಯ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆಯನ್ನು ಇಡುತ್ತಿರುವ ಸಂತೋಷದ ಕ್ಷಣ ಇದು. ನಮ್ಮ ಗ್ರಾಮ ಮತ್ತು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳುತ್ತಿರುವ ಈ ಯೋಜನೆಗಳು ಜನಜೀವನವನ್ನು ಸುಧಾರಿಸುವುದಕ್ಕೆ ಪ್ರಮುಖವಾದ ಪಾತ್ರ ವಹಿಸಲಿವೆ.

ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲ, ಅದು ಜನರ ಬದುಕಿನಲ್ಲಿ ಸುಧಾರಣೆ ತರುವ ಪ್ರಕ್ರಿಯೆ. ಉತ್ತಮ ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ ನಮ್ಮ ಪ್ರಮುಖ ಗುರಿಯಾಗಿದೆ. ಈ ದಿಕ್ಕಿನಲ್ಲಿ ನಾವು ತೆಗೆದುಕೊಳ್ಳುತ್ತಿರುವ ಪ್ರತಿಯೊಂದು ಹೆಜ್ಜೆಯೂ ಜನರ ಭವಿಷ್ಯವನ್ನು ಬಲಪಡಿಸುವುದಕ್ಕೆ ಸಹಕಾರಿಯಾಗುತ್ತದೆ.

ನಾನು ಜನರ ನಂಬಿಕೆಗೆ ತಕ್ಕಂತೆ ಕೆಲಸ ಮಾಡುತ್ತಿದೆ. ಯಾವುದೇ ಕಾಮಗಾರಿಯೂ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೇ, ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದು ನಮ್ಮ ಆದ್ಯತೆಯಾಗಿದೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸಹ ಇದನ್ನು ಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು ಎಂದರು.

ಬಸವೇಶ್ವರ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ?15 ಲಕ್ಷ, ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ?30 ಲಕ್ಷ, ಮೌನೇಶ್ವರ ದೇವಸ್ಥಾನದ ಬಳಿ ಭವನ ನಿರ್ಮಾಣಕ್ಕೆ ?5 ಲಕ್ಷ,

ರೇವಣಸಿದ್ದೇಶ್ವರ ದೇವಸ್ಥಾನದ ಬಳಿ ಭವನ ನಿರ್ಮಾಣಕ್ಕೆ ?5 ಲಕ್ಷ, ಲಿಂಗಾಯತ ಶ್ಮಶಾನ ಭೂಮಿಗೆ ತಂತಿ ಬೇಲಿ ಅಳವಡಿಸಲು ?5 ಲಕ್ಷ,

ಗ್ರಾಮದ ವಿವಿಧ ಕಡೆಗಳಲ್ಲಿ (ನಾಲ್ಕು) ?12 ಲಕ್ಷ ವೆಚ್ಚದಲ್ಲಿ ಹೈಮಾಸ್ಟ್ ದೀಪಗಳ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು,

ಈ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವ ಜವಾಬ್ದಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲಿದೆ. ಸಾರ್ವಜನಿಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಯಾವುದೇ ತೊಂದರೆಗಳಿಲ್ಲದೆ ಕಾರ್ಯಗಳನ್ನು ಮುನ್ನಡೆಸಬೇಕು ಎಂದು ತಿಳಿಸಿದರು.

ಬಳಿಕ ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವಸ್ಥಾನದ ಸಮೀಪ ನಮ್ಮ ಅನುದಾನದಲ್ಲಿ ನಿರ್ಮಿಸಲಾದ ಭವನವನ್ನು ಲೋಕಾರ್ಪಣೆ ಮಾಡಲಾಯಿತು. ಕುರುಬಗೊಂಡ ಸಮಾಜದ ಮುಖಂಡರು ಕಂಬಳಿ ಹೊದಿಸಿ ಸನ್ಮಾನಿಸಿ, ಕುರಿ ಮರಿಯನ್ನು ಉಡುಗೊರೆಯಾಗಿ ನೀಡಿ ಆತ್ಮೀಯ ಗೌರವ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಗ್ರಾಮಸ್ಥರಿಗೆ ಹೃತ್ಪೂರ್ವಕ ಧನ್ಯವಾದಗಳು. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಿಮ್ಮ ವಿಶ್ವಾಸಕ್ಕೆ ತಕ್ಕಂತೆ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಜ ರೆಡ್ಡಿ ಶಾಬಾದ, ಗುರುನಾಥ ರಾಜಗೀರ, ಶಿವಕುಮಾರ ಸ್ವಾಮಿ, ಶಿವಶರಣಪ್ಪ ಆಗರಗಿ, ಕಾಶಿನಾಥ ಅಲ್ದಿ,ಅಡೆಪ್ಪ ಶೇರಿಕಾರ, ಸೋಮನಾಥ ಉಪ್ಪಿನ, ಫಾಳೇಪ್ಪ ಚಟನಳ್ಳಿ, ಪುಂಡಲೀಕ ಟುಬಾಕ, ಸುಭಾಷ ಮೆಟಗೆ, ಭೀಮರಾವ ಬೀರಾದರ, ಬುದಯ್ಯಾ ಆಚಾರಿ,ಸಂಜುಕುಮಾರ ಅಲ್ದಿ, ಇಬ್ರಾಹಿಂ, ರಾಮಕೃಷ್ಣ, ರಾಕೇಶ ಹುಮನಾಬಾದೆ,ವೆಂಕಟರೆಡ್ಡಿ, ಹೇಮಾ ತುಕ್ಕಾರೆಡ್ಡಿ,ಅರುಣಕುಮಾರ ಪಾಟೀಲ, ಶರಣು ಸಿದ್ದಾ, ರಾಜಕುಮಾರ ಮುಲಗಿ,ಮಾರುತಿ ಸಿದ್ದಪ್ಪ ಗುದಗಿ, ಪ್ರಭು ಮಂದಕನಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಭಕ್ತಿಯ ಸುವಾಸನೆ ಇಲ್ಲದವನಿಗೆ ಮೋಕ್ಷವಿಲ್ಲ: ಡಾ.ದುಂಡೇಶ್ವರ ಶ್ರೀಗಳು

ಜಮಖಂಡಿ ಏ.26: ಭಕ್ತಿ ಮತ್ತು ನಾಮಸ್ಮರಣೆಯ ಮೂಲಕವೇ ಮಾನವನ ಜೀವನ ಪಾವನವಾಗುತ್ತದೆ ಎಂದು ನಂದೇಶ್ವರ-ಮಧುರಖಡಿ ಕಮರಿಮಠದ ಡಾ. ದುಂಡೇಶ್ವರ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ತಾಲೂಕಿನ ಹುನ್ನೂರಿನಲ್ಲಿ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಶ್ರೀಗುರು ಕಾಶಿಲಿಂಗೇಶ್ವರ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಜೀರ್ಣೋದ್ಧಾರಗೊಂಡ ಸಮಾಜ ಮಂದಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಜೀವನದ ಮಹತ್ವವನ್ನು ವಿವರಿಸಿದ ಅವರು, ''ಹೂವುಗಳು ಸುವಾಸನೆ ಹರಡುವಂತೆ ಮಾನವನು ಭಕ್ತಿಯಿಂದ ಜೀವನವನ್ನು ಪರಿಮಳಗೊಳಿಸಬೇಕು. ಅನೇಕ ಜನ್ಮಗಳ ನಂತರ ದೊರೆಯುವ ಮಾನವ ಜನ್ಮವನ್ನು ಸಾರ್ಥಕಗೊಳಿಸಬೇಕಾಗಿದೆ'' ಎಂದು ಹೇಳಿದರು.

ಅಹಂಕಾರವು ಭಕ್ತಿಗೆ ಅಡ್ಡಿಯಾಗುತ್ತದೆ ಎಂದು ಹೇಳಿದ ಅವರು, ಸದ್ಗುಣಗಳನ್ನು ಬೆಳೆಸಿಕೊಳ್ಳುವುದು ಮತ್ತು ದುರುಗುಣಗಳನ್ನು ತ್ಯಜಿಸುವುದು ಅಗತ್ಯವೆಂದು ತಿಳಿಸಿದರು. ಪೋಷಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಹಾಗೂ ಮಕ್ಕಳು ಪೋಷಕರಿಗೆ ಗೌರವ ತೋರಬೇಕು ಎಂದು ಸಂದೇಶ ನೀಡಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

'ತನಿಖಾ ಸಂಸ್ಥೆಗಳ ಭಯ'ಕ್ಕೆ ಬಿದ್ದು ಆಪ್ ತೊರೆದು ಬಿಜೆಪಿ ಸೇರಿದ 7 ಮಂದಿ ರಾಜ್ಯಸಭಾ ಸದಸ್ಯರು

ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ನಿರ್ನಾಮ ಮಾಡುವ ಬಿಜೆಪಿಯ ತಂತ್ರ ಯಶಸ್ವಿಯಾಗುತ್ತಿರಬಹುದು, ಆದರೆ ಇದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಲ್ಲ. ಸಂವಿಧಾನದ ಹೆಸರಲ್ಲಿ ನಡೆಯುತ್ತಿರುವ ಈ ರಾಜಕೀಯ ವಿಲೀನ ವಾಸ್ತವದಲ್ಲಿ ರಾಜಕೀಯ ಶರಣಾಗತಿ.

ಭಾರತದ ರಾಜಕಾರಣದಲ್ಲಿ ತತ್ವ-ಸಿದ್ಧಾಂತಗಳಿಗಿಂತ ಸಂದರ್ಭಗಳು ಮತ್ತು ತನಿಖಾ ಸಂಸ್ಥೆಗಳ ಭಯವೇ ಹೆಚ್ಚು ಕೆಲಸ ಮಾಡುತ್ತಿವೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಆಮ್ ಆದ್ಮಿ ಪಕ್ಷದ ರಾಜ್ಯಸಭೆಯಲ್ಲಿ ಎಎಪಿಯ ಧ್ವನಿಯಾಗಿದ್ದ ಯುವ ನಾಯಕ ರಾಘವ್ ಚಡ್ಡಾ ಸೇರಿ ಒಟ್ಟು 7 ಮಂದಿ ಬಿಜೆಪಿಗೆ ಜಿಗಿದಿರುವುದು ದೆಹಲಿ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ. ಅಚ್ಚರಿಯ ಸಂಗತಿ ಎಂದರೆ, 15 ದಿನಗಳ ಹಿಂದೆ ರಾಘವ್ ಚಡ್ಡಾ ಅವರ ಸ್ಥಾನಕ್ಕೆ ರಾಜ್ಯಸಭಾ ಉಪ ನಾಯಕರಾಗಿ ನೇಮಕಗೊಂಡ ಅಶೋಕ್ ಮಿತ್ತಲ್ ಕೂಡ ಬಿಜೆಪಿಗೆ ಸೇರುತ್ತಿದ್ದಾರೆ. ಇದು ಆಮ್ ಆದ್ಮಿ ಪಕ್ಷಕ್ಕೆ ತಡೆಯಲಾರದ ಹೊಡೆತವಾಗಿ ಪರಿಣಮಿಸಿದೆ.

ರಾಘವ್ ಚಡ್ಡಾ ಅವರ ಪ್ರಕಾರ, ಎಲ್ಲಾ ಸಂಸದರು ಈ ಸಂಬಂಧ ದಾಖಲೆಗಳಿಗೆ ಸಹಿ ಹಾಕಿ ರಾಜ್ಯಸಭೆಯ ಅಧ್ಯಕ್ಷರಿಗೆ ಸಲ್ಲಿಸಿದ್ದಾರೆ. ತಮ್ಮೊಂದಿಗೆ ಮೂವರು ಸಂಸದರು ಇದ್ದಾರೆ, ಉಳಿದವರಲ್ಲಿ ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಸೇರಿದ್ದಾರೆ ಎಂದು ಅವರು ಹೇಳಿದ್ದಾರೆ.

ಸಂವಿಧಾನದ 2/3 ನಿಯಮವನ್ನು ಬಳಸಿ ನಾವು ಬಿಜೆಪಿಯೊಂದಿಗೆ ವಿಲೀನವಾಗುತ್ತಿದ್ದೇವೆ ಎಂದು ಚಡ್ಡಾ ಹೇಳುತ್ತಿರುವುದು ಮೇಲ್ನೋಟಕ್ಕೆ ಕಾನೂನುಬದ್ಧವಾಗಿ ಕಂಡರೂ, ಇದರ ಹಿಂದಿರುವ ''ಬ್ಲ್ಯಾಕ್‌ಮೇಲ್ ತಂತ್ರ'' ಮತ್ತು ಇಡಿ () ದಾಳಿಯ ನೆರಳು ಪ್ರಜಾಪ್ರಭುತ್ವದ ಕರಾಳ ಮುಖವನ್ನು ಅನಾವರಣಗೊಳಿಸುತ್ತಿದೆ.

ಇನ್ನು ಏಳು ರಾಜ್ಯಸಭಾ ಸಂಸದರ ಈ ಹಠಾತ್ ಪಕ್ಷಾಂತರದ ವಿರುದ್ಧ ಆಮ್ ಆದ್ಮಿ ಪಕ್ಷದ ಹಿರಿಯ ನಾಯಕ ಸಂಜಯ್ ಸಿಂಗ್ ಕೆರಳಿ ಕೆಂಡವಾಗಿದ್ದಾರೆ. ಇದನ್ನು ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿಯ ಆಪರೇಷನ್ ಕಮಲದ ಭಾಗ ಎಂದು ಅವರು ಗುಡುಗಿದ್ದಾರೆ. ''ಪಂಜಾಬ್‌ನ ಜನರು ಈ ಏಳು ಮಂದಿ ದೇಶದ್ರೋಹಿಗಳ ಹೆಸರುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು'' ಎಂದು ಆಕ್ರೋಶ ವ್ಯಕ್ತಪಡಿಸಿರುವ ಅವರು, ''ಇದು ಕೇವಲ ಪಕ್ಷಾಂತರವಲ್ಲ, ಬದಲಾಗಿ ಪಂಜಾಬ್‌ನ ಜನಾದೇಶವನ್ನು ಬುಡಮೇಲು ಮಾಡುವ ಮತ್ತು ಅಲ್ಲಿನ ಸರ್ಕಾರವನ್ನು ಅಸ್ಥಿರಗೊಳಿಸುವ ವ್ಯವಸ್ಥಿತ ಸಂಚು'' ಎಂದು ಆರೋಪಿಸಿದ್ದಾರೆ. ತನಿಖಾ ಸಂಸ್ಥೆಗಳನ್ನು ಬೇಟೆ ನಾಯಿಗಳಂತೆ ಬಳಸಿ ಸಂಸದರನ್ನು ಹೆದರಿಸಿ ಬಿಜೆಪಿಗೆ ಸೇರಿಸಿಕೊಳ್ಳಲಾಗುತ್ತಿದೆ ಎಂಬ ಅವರ ಮಾತುಗಳು, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯು ಕೇವಲ ಸಂಖ್ಯಾಬಲ ಮತ್ತು ಅಧಿಕಾರ ದಾಹದ ಆಟವಾಗಿ ಹೇಗೆ ಬದಲಾಗುತ್ತಿದೆ ಎಂಬುದಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ರಾಘವ್ ಚಡ್ಡಾ ರಾಜ್ಯಸಭೆಯಲ್ಲಿ ಎಎಪಿಯ ಉಪನಾಯಕರಾಗಿ ಅತ್ಯಂತ ಚುರುಕಾಗಿ ಕೆಲಸ ಮಾಡುತ್ತಿದ್ದರು. ಒಂದು ಸಮಯದಲ್ಲಿ ಚಡ್ಡಾ ಅವರನ್ನು ಆಪ್ ಪಕ್ಷದ ಭವಿಷ್ಯದ ನಾಯಕ ಎಂದು ಪರಿಗಣಿಸಲಾಗುತ್ತಿತ್ತು. ಬೆಲೆ ಏರಿಕೆ, ಉದ್ಯೋಗ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಗಳ ದುರುಪಯೋಗದ ಬಗ್ಗೆ ಸಂಸತ್ತಿನಲ್ಲಿ ಅವರು ಗುಡುಗುತ್ತಿದ್ದರೆ ಮೋದಿ ಸರ್ಕಾರಕ್ಕೆ ನಡುಕ ಶುರುವಾಗುತ್ತಿತ್ತು. ಆದರೆ, ಕಳೆದ ಕೆಲವು ತಿಂಗಳುಗಳಿಂದ ಚಡ್ಡಾ ಅವರ ಮಾತುಗಳು ಹಳಿ ತಪ್ಪಿದ್ದವು. ಕೇಂದ್ರ ಸರ್ಕಾರದ ನೀತಿಗಳನ್ನು ಟೀಕಿಸಬೇಕಿದ್ದ ಅವರು, ಏರ್‌ಪೋರ್ಟ್ ಕ್ಯಾಂಟೀನ್‌ಗಳಲ್ಲಿ ಸಮೋಸಾ ಬೆಲೆ ಜಾಸ್ತಿ ಆಗಿದೆ ಎಂದು ಕ್ಷುಲ್ಲಕ ವಿಷಯಗಳನ್ನು ಮಾತನಾಡಲು ಶುರು ಮಾಡಿದ್ದರು. ದೇಶದ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದ ನಾಯಕನೊಬ್ಬ ಏಕಾಏಕಿ ಕ್ಯಾಂಟೀನ್ ಮೆನು ಬಗ್ಗೆ ಚರ್ಚಿಸುತ್ತಿರುವುದು ಆಪ್ ನಾಯಕರಿಗೆ ಅಚ್ಚರಿ ಮತ್ತು ಅನುಮಾನ ಮೂಡಿಸಿತ್ತು. ''ಅವರಿಗೆ ಮೋದಿ ಅಂದರೆ ಭಯ ಶುರುವಾಗಿದೆ'' ಎಂದು ಆಪ್ ನಾಯಕರು ಆರೋಪಿಸಿದ್ದು ಇವತ್ತು ನಿಜವಾಗಿದೆ.

ಇನ್ನು ಆಪ್ ಪಕ್ಷದಿಂದ ಹಂತ ಹಂತವಾಗಿ ದೂರವಾಗುತ್ತಿದ್ದ ರಾಘವ್ ಚಡ್ಡಾ, ಬಿಜೆಪಿಗೆ ಹತ್ತಿರವಾಗುತ್ತಿದ್ದುದು ಸ್ಪಷ್ಟವಾಗಿ ಕಂಡುಬರುತ್ತಿತ್ತು. ಇತ್ತೀಚಿಗೆ ರಾಘವ್ ಚಡ್ಡಾ ಅವರಿಂದ + ಭದ್ರತೆಯನ್ನು ಹಿಂಪಡೆದಿದ್ದ ಪಂಜಾಬ್ ಸರ್ಕಾರ, ಪಕ್ಷ ಮತ್ತು ಅವರ ನಡುವಿನ ಅಂತರಕ್ಕೆ ಸಾಕ್ಷಿ ಒದಗಿಸಿತ್ತು. ಆದರೆ ಪಂಜಾಬ್ ಸರ್ಕಾರದ ತೀರ್ಮಾನ ಹೊರಬಿದ್ದ ಒಂದು ಗಂಟೆ ಬಳಿಕ, ಕೇಂದ್ರ ಸರ್ಕಾರ ರಾಘವ್ ಚಡ್ಡಾ ಅವರಿಗೆ ಶ್ರೇಣಿಯ ಭದ್ರತೆ ಘೋಷಿಸಿತ್ತು.

ರಾಘವ್ ಚಡ್ಡಾ ಅವರ ಈ ದಿಢೀರ್ ಬದಲಾವಣೆಗೆ ಕಾರಣ ದೆಹಲಿ ಜಲ ಮಂಡಳಿಯ ಹಗರಣ ಎನ್ನಲಾಗುತ್ತಿದೆ. 2026ರ ಏಪ್ರಿಲ್‌ನಲ್ಲಿ ದೆಹಲಿ ಜಲ ಮಂಡಳಿಯ ಭ್ರಷ್ಟಾಚಾರದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು () ಆಪ್ ನಾಯಕರ ಮನೆಗಳ ಮೇಲೆ ದಾಳಿ ನಡೆಸಿತ್ತು. ಈ ದಾಳಿಯ ಸಂದರ್ಭದಲ್ಲಿ ರಾಘವ್ ಚಡ್ಡಾ ಅವರ ಹೆಸರೂ ಕೇಳಿಬಂದಿತ್ತು. ಬಿಜೆಪಿಯ ವಿರುದ್ಧ ಮಾತನಾಡಿದರೆ ಜೈಲು, ಬಿಜೆಪಿಗೆ ಸೇರ್ಪಡೆಯಾದರೆ ಕ್ಲೀನ್ ಚಿಟ್ ಸಿಗುವ ''ವಾಷಿಂಗ್ ಮಷಿನ್'' ತಂತ್ರಕ್ಕೆ ರಾಘವ್ ಚಡ್ಡಾ ಕೂಡ ಬಲಿಯಾಗಿದ್ದಾರೆ.

ಇನ್ನು ಚಡ್ಡಾ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, ''ನಾನು ತಪ್ಪಾದ ಪಕ್ಷದಲ್ಲಿದ್ದ ಸರಿಯಾದ ವ್ಯಕ್ತಿ'' ಎಂದು ಹೇಳಿದ್ದಾರೆ. ಇದು ರಾಜಕೀಯದಲ್ಲಿ ಸಾಮಾನ್ಯವಾಗಿ ಕೇಳಿಬರುವ ಮಾತು. ಪಕ್ಷ ಬದಲಾಯಿಸುವಾಗ, ನಾಯಕರು ತಮ್ಮ ಹಳೆಯ ಪಕ್ಷವನ್ನು ಟೀಕಿಸುವುದು ಹೊಸದೇನಲ್ಲ. ಆದರೆ ಇಲ್ಲಿ ಬರುವ ಪ್ರಶ್ನೆ, ನಿನ್ನೆ ಸರಿಯಾದ ಪಕ್ಷ ಆಗಿದ್ದದ್ದು, ಇವತ್ತು ತಪ್ಪಾದ ಪಕ್ಷ ಹೇಗೆ ಆಯಿತು? ಕೊನೆಗೂ ಕೇಂದ್ರ ಸರ್ಕಾರದ ಬ್ಲ್ಯಾಕ್‌ಮೇಲ್ ಪ್ಲಾನ್‌ನ ಸುಳಿಗೆ ಸಿಲುಕಿದ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ತಮ್ಮ ರಾಜಕೀಯ ಭವಿಷ್ಯವನ್ನು ಉಳಿಸಿಕೊಳ್ಳಲು ತತ್ವಗಳನ್ನೇ ಬಲಿಕೊಟ್ಟಿದ್ದಾರೆ.

ಆಪ್ ಪಕ್ಷಕ್ಕೆ ಬಂದಿರುವ ಈ ಸ್ಥಿತಿಗೆ ಆಪ್ ಈ ಹಿಂದೆ ಅನುಸರಿಸಿದ ರಾಜಕೀಯ ತಂತ್ರಗಾರಿಕೆಯ ಫಲವೇ ಕಾರಣ ಎನ್ನಬಹುದು. ಬಿಜೆಪಿ ಹಾರ್ಡ್‌ಕೋರ್ ಹಿಂದುತ್ವವನ್ನು ತನ್ನ ಅಸ್ತ್ರವಾಗಿಸಿಕೊಂಡರೆ, ಎಎಪಿ ಅದನ್ನು ಎದುರಿಸಲು ಸಾಫ್ಟ್ ಹಿಂದುತ್ವದ ಮೊರೆ ಹೋಗಿತ್ತು. ಇದಕ್ಕೆ ಪ್ರಮುಖ ಉದಾಹರಣೆ ಎಂದರೆ 2020ರ ದೆಹಲಿ ಗಲಭೆ. ಆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಮೇಲೆ ನಡೆದ ಕಗ್ಗೊಲೆ ಮತ್ತು ದೌರ್ಜನ್ಯಗಳ ಬಗ್ಗೆ ಅರವಿಂದ್ ಕೇಜ್ರಿವಾಲ್ ಮತ್ತು ಅವರ ತಂಡ ವಹಿಸಿದ ನಿಗೂಢ ಮೌನವು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿತ್ತು. ಸಂತ್ರಸ್ತರ ಪರವಾಗಿ ಗಟ್ಟಿಯಾಗಿ ನಿಲ್ಲುವ ಬದಲು, ಕೇವಲ ಹನುಮಾನ್ ಚಾಲೀಸಾ ಪಠಣ ಮತ್ತು ಧಾರ್ಮಿಕ ರಾಜಕಾರಣದ ಮೂಲಕ ಬಹುಸಂಖ್ಯಾತ ವೋಟ್ ಬ್ಯಾಂಕ್ ಅನ್ನು ಸಮಾಧಾನಪಡಿಸಲು ಆಪ್ ಪ್ರಯತ್ನಿಸಿತು. ಸೈದ್ಧಾಂತಿಕವಾಗಿ ಸ್ಪಷ್ಟ ನಿಲುವು ತಳೆಯದೆ, ಬಿಜೆಪಿಯ ಸಿದ್ಧಾಂತವನ್ನ ಒಪ್ಪಿಕೊಂಡಂತೆ ವರ್ತಿಸಿದ್ದು ಇವತ್ತು ಆ ಪಕ್ಷದ ನಾಯಕರೇ ಬಿಜೆಪಿಯತ್ತ ಮುಖ ಮಾಡಲು ದಾರಿಯಾಗಿದೆ.

ಅಷ್ಟೇ ಅಲ್ಲ ಅಯೋಧ್ಯೆ ರಾಮಮಂದಿರದ ವಿಷಯದಲ್ಲೂ ಬಿಜೆಪಿಗಿಂತ ತಾವೇನು ಕಡಿಮೆ ಇಲ್ಲ ಎಂಬಂತೆ ವರ್ತಿಸಿದ ಆಪ್‌ಗೆ ಈಗ ತಿಳಿಯಬೇಕಿರುವ ವಿಷಯವೊಂದಿದೆ. ಬಿಜೆಪಿಯ ಸಿದ್ಧಾಂತಕ್ಕೆ ಪರ್ಯಾಯವಾಗಿ ಒಂದು ಗಟ್ಟಿಯಾದ ಸಿದ್ಧಾಂತವನ್ನು ರೂಪಿಸಿಕೊಳ್ಳುವಲ್ಲಿ ಕೇಜ್ರಿವಾಲ್ ವಿಫಲರಾಗಿದ್ದಾರೆ.

ಆಮ್ ಆದ್ಮಿ ಪಕ್ಷದ ಸೈದ್ಧಾಂತಿಕ ಇಬ್ಬಂದಿತನಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಿಲ್ಲ. ಈ ಹಿಂದೆ ಸ್ವತಃ ಅರವಿಂದ್ ಕೇಜ್ರಿವಾಲ್ ಅವರು ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರ ವಿರುದ್ಧ ಕೋರ್ಟ್‌ನಲ್ಲಿ ಮನವಿ ಸಲ್ಲಿಸುತ್ತಾ, ''ಇವರು ಆರ್‌ಎಸ್‌ಎಸ್ ಬೆಂಬಲಿತ ಅಧಿವಕ್ತ ಪರಿಷತ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ನ್ಯಾಯಮೂರ್ತಿ ಶರ್ಮಾ ಅವರ ಮಕ್ಕಳು ಕೇಂದ್ರ ಸರ್ಕಾರದ ವಕೀಲರ ತಂಡದಲ್ಲಿದ್ದು, ಸಿಬಿಐ ಪರ ಹಾಜರಾಗುತ್ತಿದ್ದಾರೆ. ಹಾಗಾಗಿ ಇವರು ನನ್ನ ಪ್ರಕರಣದ ತೀರ್ಪು ನೀಡಬಾರದು, ಇವರು ರಿಕ್ಯೂಸಲ್ (ಪ್ರಕರಣದಿಂದ ಹಿಂದೆ ಸರಿಯುವುದು) ಪಡೆದುಕೊಳ್ಳಬೇಕು'' ಎಂದು ಆಗ್ರಹಿಸಿದ್ದರು. ಆಪ್ ಎಂಬುದು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಸಂಪೂರ್ಣ ವಿರುದ್ಧವಾದ ಪಕ್ಷ ಎಂದು ಅಂದು ದೊಡ್ಡ ದೊಡ್ಡ ಡೈಲಾಗ್‌ಗಳನ್ನು ಹೊಡೆದಿದ್ದ ಕೇಜ್ರಿವಾಲ್, ವಾಸ್ತವದಲ್ಲಿ ಅದೇ ಆರ್‌ಎಸ್‌ಎಸ್ ಹಾದಿಯಾದ ಸಾಫ್ಟ್ ಹಿಂದುತ್ವವನ್ನು ಪಾಲಿಸುತ್ತಿರುವುದು ಒಂದು ದೊಡ್ಡ ವಿಪರ್ಯಾಸ. ಕೋರ್ಟ್‌ನಲ್ಲಿ ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ವಿರೋಧ ವ್ಯಕ್ತಪಡಿಸುವ ಇವರು, ಚುನಾವಣಾ ಅಖಾಡದಲ್ಲಿ ಮಾತ್ರ ಹನುಮಾನ್ ಚಾಲೀಸಾ ಪಠಣ ಮತ್ತು ಧಾರ್ಮಿಕ ರಾಜಕಾರಣದ ಮೂಲಕ ಬಿಜೆಪಿಯ ಬಿ ಟೀಮ್‌ನಂತೆ ವರ್ತಿಸುತ್ತಾರೆ. ಇಂತಹ ಸೈದ್ಧಾಂತಿಕ ಗೊಂದಲವೇ ಇಂದು ರಾಘವ್ ಚಡ್ಡಾ ಅಂತಹ ನಾಯಕರು ನೇರವಾಗಿ ಆರ್‌ಎಸ್‌ಎಸ್ ಮೂಲದ ಬಿಜೆಪಿಗೆ ಸೇರ್ಪಡೆಯಾಗಲು ದಾರ ಮಾಡಿಕೊಟ್ಟಿದೆ.

ಪಕ್ಷದ ಪ್ರಮುಖ ನಾಯಕರು ತನಿಖಾ ಸಂಸ್ಥೆಗಳ ಭಯಕ್ಕೆ ಪಕ್ಷ ಬಿಡುತ್ತಿದ್ದಾರೆ ಎಂದರೆ, ಪಕ್ಷದ ಸಂಘಟನೆಯಲ್ಲಿ ಸಿದ್ಧಾಂತಕ್ಕಿಂತ ಅವಕಾಶವಾದವೇ ಹೆಚ್ಚಾಗಿದೆ ಎಂದರ್ಥ. ಸಿದ್ಧಾಂತದ ಬುನಾದಿ ಇಲ್ಲದ ಸಾಫ್ಟ್ ಹಿಂದುತ್ವದ ರಾಜಕಾರಣವು ಅಂತಿಮವಾಗಿ ಬಿಜೆಪಿ ತಿಮಿಂಗಿಲದ ಬಾಯಿಗೆ ಆಹಾರವಾಗುತ್ತವೆ ಎಂಬುದಕ್ಕೆ ರಾಘವ್ ಚಡ್ಡಾ ಅವರ ಪಕ್ಷಾಂತರವೇ ಸಾಕ್ಷಿ.

ಜನರು ಒಬ್ಬ ನಾಯಕನಿಗೆ ಮತ ಹಾಕುವುದು ಆತನ ಪಕ್ಷದ ಸಿದ್ಧಾಂತವನ್ನು ನೋಡಿ. ಆದರೆ ಗೆದ್ದ ನಂತರ ಸಂವಿಧಾನದ ನಿಯಮಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ತಮ್ಮ ಸಾಫ್ಟ್ ಹಿಂದುತ್ವದ ಜೊತೆ ವಿಲೀನವಾಗುವುದು ಮತದಾರರಿಗೆ ಮಾಡುತ್ತಿರುವ ದ್ರೋಹ. ರಾಘವ್ ಚಡ್ಡಾ ಅವರಂತಹ ಯುವ ನಾಯಕರು ಭ್ರಷ್ಟಾಚಾರದ ಹಣೆಪಟ್ಟಿಯಿಂದ ಬಚಾವಾಗಲು ಎದುರಾಳಿ ಪಾಳಯಕ್ಕೆ ಶರಣಾಗಿರುವುದು ಯುವ ಜನಾಂಗಕ್ಕೆ ತಪ್ಪು ಸಂದೇಶ ನೀಡುತ್ತದೆ.

ರಾಘವ್ ಚಡ್ಡಾ ಈಗ ಬಿಜೆಪಿ ಸೇರಿದ ಕೆಲ ದಿನಗಳಲ್ಲಿ ಕ್ಲೀನ್ ಆಗಬಹುದು. ಆದರೆ ರಾಜ್ಯಸಭೆಯಲ್ಲಿ ಅವರು ಕೆಲವು ದಿನದವರೆಗಾದರೂ ಜನರ ಪರವಾಗಿ ಎತ್ತುತ್ತಿದ್ದ ಧ್ವನಿ ಈಗ ಅಧಿಕಾರದ ದಾಹಕ್ಕೆ ಹತ್ತಿಕ್ಕಲ್ಪಟ್ಟಿದೆ. ಮೋದಿ ಸರ್ಕಾರದ ವಿರುದ್ಧ ಗುಡುಗುತ್ತಿದ್ದ ಧ್ವನಿ ಈಗ ಮೌನವಾಗಿದೆ.

ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ನಿರ್ನಾಮ ಮಾಡುವ ಬಿಜೆಪಿಯ ತಂತ್ರ ಯಶಸ್ವಿಯಾಗುತ್ತಿರಬಹುದು, ಆದರೆ ಇದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಲ್ಲ. ಸಂವಿಧಾನದ ಹೆಸರಲ್ಲಿ ನಡೆಯುತ್ತಿರುವ ಈ ''ರಾಜಕೀಯ ವಿಲೀನ'' ವಾಸ್ತವದಲ್ಲಿ ''ರಾಜಕೀಯ ಶರಣಾಗತಿ''. ರಾಘವ್ ಚಡ್ಡಾ ಮತ್ತು ತಂಡದ ಈ ನಡೆ ಇತಿಹಾಸದಲ್ಲಿ ಒಂದು ಅವಕಾಶವಾದಿ ನಡೆಯಾಗಿ ದಾಖಲಾಗಲಿದೆ. ಆಪ್ ಪಕ್ಷವು ಈಗಲಾದರೂ ತನ್ನ ಸಾಫ್ಟ್ ಹಿಂದುತ್ವದ ಮುಖವಾಡ ಕಳಚಿ ಸಿದ್ಧಾಂತದ ಮೇಲೆ ಗಮನ ಹರಿಸದಿದ್ದರೆ, ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ''ವಾಷಿಂಗ್ ಮಷಿನ್'' ಘಟನೆಗಳು ನಡೆಯುವುದರಲ್ಲಿ ಸಂಶಯವಿಲ್ಲ.

ಮುಸ್ಲಿಂ ಸಮುದಾಯದ ಜೊತೆಗಿನ ಸಖ್ಯ ಕಾಂಗ್ರೆಸ್ ಪಕ್ಷಕ್ಕೆ ಹಳೆಯದು ಮತ್ತು ಬಹಳ ಮುಖ್ಯವಾದದ್ದು



ಕಾಂಗ್ರೆಸ್ ಹೈಕಮಾಂಡ್ ಇನ್ನಷ್ಟು ತಾಳ್ಮೆಯಿಂದ ಮುಸ್ಲಿಂ ಸಮುದಾಯವನ್ನು ನೋಡಬೇಕಾಗಿತ್ತು. ಮುಸ್ಲಿಂ ಸಮುದಾಯದ ಜೊತೆಗಿನ ಸಖ್ಯ ಕಾಂಗ್ರೆಸ್ ಪಕ್ಷಕ್ಕೆ ಹಳೆಯದು ಮತ್ತು ಬಹಳ ಮುಖ್ಯವಾದದ್ದು. 2011ರ ಜನಗಣತಿಯ ಪ್ರಕಾರ ದೇಶದಲ್ಲಿ ಮುಸಿಮರ ಜನಸಂಖ್ಯೆ ಶೇ. 11ರಷ್ಟು. ಶೇ 14ಕ್ಕೂ ಇದು ಏರಿದೆ ಎಂಬ ಅಂದಾಜೂ ಇದೆ. ಇದು ಸಣ್ಣ ಸಂಖ್ಯಾಬಲವೇನೂ ಅಲ್ಲ.

ಭಾರತದಂಥ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಚುನಾವಣೆ ಎನ್ನುವುದು ನಿರಂತರ ಕುತೂಹಲ ಹುಟ್ಟಿಸುವ ಸಂಗತಿ. ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ಮತ್ತು ಪುದುಚೇರಿ ವಿಧಾನಸಭೆಗಳಿಗಾಗಿ ನಡೆಯುತ್ತಿರುವ ಚುನಾವಣೆ ಅನೇಕ ಕಾರಣಗಳಿಗಾಗಿ ಭಾರೀ ಕುತೂಹಲವನ್ನೇ ಹುಟ್ಟಿಸಿದೆ. ಈ ಎಲ್ಲ ರಾಜ್ಯಗಳಲ್ಲಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಭಾರತೀಯ ಜನತಾ ಪಕ್ಷ ಕೇಂದ್ರದಲ್ಲಿರುವ ತನ್ನ ಪಕ್ಷದ ಸರ್ಕಾರವನ್ನು ತೊಡಗಿಸಿಕೊಂಡು ಮಹಾನ್ ಸಮರವನ್ನೇ ನಡೆಸುತ್ತಿದೆ. ಈ ರಾಜ್ಯಗಳಲ್ಲಿ ಪ್ರಬಲವಾಗಿರುವ ಪಕ್ಷಗಳು ಮತ್ತು ಕಾಂಗ್ರೆಸ್ ಪಕ್ಷ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸವಾಲನ್ನು ಮುಂದುಮಾಡಿಕೊಂಡು ರಣೋತ್ಸಾಹವನ್ನೇ ತೋರಿಸುತ್ತಿವೆ. ಇದು ಅಳಿವು-ಉಳಿವಿನ ಪ್ರಶ್ನೆಯೂ ಆಗಿರುವುದರಿಂದ ಸಹಜವಾಗಿಯೇ ಎರಡೂ ಕಡೆ ದೊಡ್ಡ ಪೈಪೋಟಿಯೇ ಉಂಟಾಗಿದೆ.

ಕರ್ನಾಟಕಕ್ಕೆ ಈ ದೃಷ್ಟಿಯಿಂದ ಅಂಥ ಸವಾಲು ಎದುರಾಗಿಲ್ಲ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯ ಉಪಚುನಾವಣೆ ಫಲಿತಾಂಶ ಏನೇ ಆದರೂ ರಾಜಕೀಯವಾಗಿ ಅಲ್ಲೋಲ ಕಲ್ಲೋಲವಾಗುವ ಬೆಳವಣಿಗೆಯಂತೂ ಕರ್ನಾಟಕಕ್ಕೆ ಇಲ್ಲವೇ ಇಲ್ಲ ಎನ್ನಬಹುದು. ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಈ ಎರಡೂ ಸ್ಥಾನಗಳನ್ನು ಕಳೆದುಕೊಂಡರೂ, ಅದರ ಅಸ್ತಿತ್ವಕ್ಕೆ ತೊಂದರೆಯೇನೂ ಆಗುವುದಿಲ್ಲ. ಸರ್ಕಾರ ನಿರಾತಂಕವಾಗಿ ಮುಂದುವರಿಯಲು ದೊಡ್ಡ ಗಂಡಾಂತರವೇನೂ ಇರುವುದಿಲ್ಲ.

ಆದರೆ, ದಾವಣಗೆರೆಯ ಉಪಚುನಾವಣೆ ಅನೇಕ ಕಾರಣಗಳಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಸವಾಲೇ ಆಗಲಿದೆ. ಕಾಂಗ್ರೆಸ್ ಪಕ್ಷದ ಹಿರಿಯ ರಾಜಕಾರಣಿ ಮತ್ತು ಪ್ರಭಾವೀ ವ್ಯಕ್ತಿಯಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಅವರನ್ನು ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಿದಾಗಲೇ ಈ ಸವಾಲು ಎದುರಾಯಿತು. ಮೇಲ್ನೋಟಕ್ಕೆ ಈ ಆಯ್ಕೆ ಸರಿಯಾಗಿ ಕಾಣಬಹುದು. ಚುನಾವಣೆಯನ್ನು ಗೆಲ್ಲುವ ಎಲ್ಲ ಅಂಶಗಳನ್ನೂ ಗಮನಿಸಿಯೇ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡಿರಬಹುದು. ಆದರೆ ಅಭ್ಯರ್ಥಿಯನ್ನು ಆಯ್ಕೆ ಮಾಡುವಾಗ ಇನ್ನೂ ಕೆಲವು ಸೂಕ್ಷ್ಮ ಸಂಗತಿಗಳನ್ನು ಪರಿಶೀಲಿಸುವ ಅಗತ್ಯ ಖಂಡಿತಾ ಕಾಂಗ್ರೆಸ್ ಪಕ್ಷಕ್ಕೆ ಇತ್ತು ಎಂಬುದು ಈಗ ಬಹಳ ಸ್ಪಷ್ಟವಾಗಿ ಕಾಣಿಸುತ್ತಿದೆ.

ಆರು ಬಾರಿ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶಾಮನೂರು ಶಿವಶಂಕರಪ್ಪ ಅವರು 2023ರಲ್ಲಿ ಸ್ಪರ್ಧಿಸಿದಾಗ, ಇದು ನನ್ನ ಕೊನೆಯ ಸೆಣಸಾಟ; ಮುಂದಿನ ಬಾರಿ ಮುಸ್ಲಿಂ ಅಭ್ಯರ್ಥಿ ಇರುತ್ತಾರೆ ಎಂದು ಹೇಳಿದ್ದರು. ಈ ವಿಧಾನಸಭಾ ಕ್ಷೇತ್ರದಲ್ಲಿ ಶೇ 40 ರಷ್ಟು ಮತದಾರರು ಮುಸ್ಲಿಂ ಮತದಾರರು. ಪ್ರತಿಚುನಾವಣೆಯಲ್ಲೂ ತಮಗೆ ಪ್ರಾತಿನಿಧ್ಯ ಸಿಗಬಹುದೆಂದು ಕಾಯುತ್ತಿದ್ದವರಿಗೆ ಈ ಉಪಚುನಾವಣೆ ದೊಡ್ಡ ಆಶಾ ಕಿರಣವನ್ನೇ ಮೂಡಿಸಿತ್ತು. ಮೂರು ಬಾರಿ ವಿಧಾನ ಪರಿಷತ್ ಸದಸ್ಯರಾಗಿದ್ದ ಅಬ್ದುಲ್ ಜಬ್ಬಾರ್ ಅವರು ತಮ್ಮನ್ನೇ ಪಕ್ಷ ಅಭ್ಯರ್ಥಿಯಾಗಿ ಕಣಕ್ಕಿಳಿಸಬಹುದೆಂಬ ಆಶಾ ಭಾವನೆಯನ್ನು ಇಟ್ಟುಕೊಂಡಿದ್ದರು. ಇಂಥ ಇನ್ನೂ ಕೆಲವರು ಇದೇ ಹಂಬಲದಿಂದ ಕಾಯುತ್ತಿದ್ದರು. ಆದರೆ, ಈ ಎಲ್ಲ ಕನಸುಗಳನ್ನು ಭಗ್ನಗೊಳಿಸುವಂತೆ ಕಾಂಗ್ರೆಸ್ ಪಕ್ಷ ಸಮರ್ಥ ಅವರನ್ನು ತನ್ನ ಸಮರ್ಥ ಅಭ್ಯರ್ಥಿ ಎಂದು ಪರಿಗಣಿಸಿ ಕಣಕ್ಕಿಳಿಸಿತು.

ಮುಸ್ಲಿಂ ಸಮುದಾಯ ಸಿಟ್ಟಿಗೆದ್ದು ಅನೇಕ ಮುಸ್ಲಿಂ ಅಭ್ಯರ್ಥಿಗಳು ಕಣಕ್ಕಿಳಿದರು. ಮತ್ತೆ ಅವರನ್ನು ಮನವೊಲಿಸುವ ಪ್ರಯತ್ನವೂ ನಡೆಯಿತು. ಕೆಲವರು ಕಣದಿಂದ ಹಿಂದೆ ಸರಿದರು. ಆದರೂ ಕಾಂಗ್ರೆಸ್ ಪಕ್ಷದ ಬಗ್ಗೆ ಕೆಲವು ಮುಸ್ಲಿಂ ನಾಯಕರ ಅಸಮಾಧಾನ ಕೊನೆಯಾಗಲಿಲ್ಲ. ಈ ಅಂಶವನ್ನು ಕಾಂಗ್ರೆಸ್ ಪಕ್ಷ ಸೂಕ್ಷ್ಮವಾಗಿ ಪರಿಗಣಿಸಿ, ಕೋಪವನ್ನು ಆರಿಸಲು ಪ್ರಯತ್ನಿಸಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಅವರನ್ನು ಆ ಸ್ಥಾನದಿಂದ ತೆಗೆದುಹಾಕಲಾಯಿತು. ಹಿರಿಯ ನಾಯಕ ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷದಿಂದ ಸಸ್ಪೆಂಡ್ ಮಾಡಲಾಯಿತು. ಪಕ್ಷ ವಿರೋಧಿ ಚಟುವಟಿಕೆಗಾಗಿ ಈ ಶಿಸ್ತಿನ ಕ್ರಮ ಎಂದೂ ಹೇಳಲಾಯಿತು. ಇನ್ನೂ ಅನೇಕ ಕಾರಣಗಳನ್ನೂ ಪಕ್ಷದ ಹೈಕಮಾಂಡ್ ಕೊಡಬಹುದು.

ಆದರೆ, ಕಾಂಗ್ರೆಸ್ ಹೈಕಮಾಂಡ್ ಇನ್ನಷ್ಟು ತಾಳ್ಮೆಯಿಂದ ಮುಸ್ಲಿಂ ಸಮುದಾಯವನ್ನು ನೋಡಬೇಕಾಗಿತ್ತು. ಮುಸ್ಲಿಮ್ ಸಮುದಾಯದ ಜೊತೆಗಿನ ಸಖ್ಯ ಕಾಂಗ್ರೆಸ್ ಪಕ್ಷಕ್ಕೆ ಹಳೆಯದು ಮತ್ತು ಬಹಳ ಮುಖ್ಯವಾದದ್ದು. 2011ರ ಜನಗಣತಿಯ ಪ್ರಕಾರ ದೇಶದಲ್ಲಿ ಮುಸಿಮರ ಜನಸಂಖ್ಯೆ ಶೇ 11ರಷ್ಟು. ಶೇ 14ಕ್ಕೂ ಇದು ಏರಿದೆ ಎಂಬ ಅಂದಾಜೂ ಇದೆ. ಇದು ಸಣ್ಣ ಸಂಖ್ಯಾಬಲವೇನೂ ಅಲ್ಲ. ಜೊತೆಗೆ ಕರ್ನಾಟಕದಲ್ಲಿ ಮುಸ್ಲಿಮರಿಗಿರುವ ಆಯ್ಕೆ ನಿಜವಾಗಿಯೂ ಕಾಂಗ್ರೆಸ್ ಪಕ್ಷವೇ. ಎಸ್‌ಡಿಪಿಐ (ಸೋಷಲಿಸ್ಟ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ತನ್ನ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸಿದರೂ, ಮುಸ್ಲಿಂ ಸಮುದಾಯ ಎಂದೂ ಆ ಅಭ್ಯರ್ಥಿಗಳನ್ನು ಪರಿಗಣಿಸಿಲ್ಲ. ಇನ್ನು ಬಿಜೆಪಿ ಮುಸ್ಲಿಮರನ್ನು ತನ್ನ ಪರಮ ವೈರಿ ಎಂದೇ ಪರಿಗಣಿಸುವ ಮನೋಭಾವವನ್ನು ದೂರಮಾಡಿಲ್ಲ. ಹೀಗಿರುವಾಗ ಮುಸ್ಲಿಂ ಸಮುದಾಯ ತನ್ನೆಲ್ಲ ಆಸೆ ಆಕಾಂಕ್ಷೆಗಳಿಗೆ ಕಾಂಗ್ರೆಸ್ ಪಕ್ಷವನ್ನು ನಂಬಿದರೆ, ಈ ನಂಬಿಕೆಯನ್ನು ಉಳಿಸಿಕೊಳ್ಳಬೇಕಾದದ್ದು ಕಾಂಗ್ರೆಸ್ ಪಕ್ಷದ ಹೊಣೆಗಾರಿಕೆಯಾಗಿತ್ತು.

ರಾಜ್ಯ ವಿಧಾನಸಭೆಯ 224 ಶಾಸಕರಲ್ಲಿ ಮುಸ್ಲಿಂ ಶಾಸಕರ ಸಂಖ್ಯೆ ಕೇವಲ 9. ಹಿಂದಿನ ವಿಧಾನಸಭೆಯಲ್ಲಿ ಈ ಸಂಖ್ಯೆ ಏಳು ಇತ್ತು ಎಂಬುದನ್ನು ಗಮನಿಸಿದರೆ ಈಗಿರುವ ಒಂಭತ್ತು ಶಾಸಕರ ಸಂಖ್ಯೆ ದೊಡ್ಡದಾಗಿ ಕಾಣಬಹುದು. ಆದರೆ, ಮುಸ್ಲಿಂ ಸಮುದಾಯದ ಜನಸಂಖ್ಯೆಯನ್ನು ಪರಿಗಣಿಸಿದರೆ ಅವರನ್ನು ಪ್ರತಿನಿಧಿಸುವವರ ಸಂಖ್ಯಾ ಬಲ 28 ಇರಬೇಕಾಗಿತ್ತು. ಇದನ್ನು ಗಮನಿಸಬೇಕಾದ ಅಗತ್ಯವೂ ಇದೆ.

ಅಹಿಂದ ತತ್ವ ಬಹುದೊಡ್ಡ ತತ್ವ. ಪ್ರಜಾಪ್ರಭುತ್ವದ ಜೀವಾಳವೂ ಆಗಬಲ್ಲದು. ಈ ಚೌಕಟ್ಟಿನೊಳಕ್ಕೆ ಮಹಿಳೆಯರನ್ನೂ ತರುವುದು ಅತ್ಯಗತ್ಯ. ಆಗಲೇ ಈ ತತ್ವ ಇನ್ನಷ್ಟು ಜೀವಕಳೆ ತುಂಬಿಕೊಳ್ಳುತ್ತದೆ. ಇಂಥ ಹೊತ್ತಿನಲ್ಲಿ ಕಾಂಗ್ರೆಸ್ ಪಕ್ಷವು ಮುಸ್ಲಿಮರನ್ನು ಕಡೆಗಣ್ಣಿನಿಂದ ನೋಡಿದ್ದು ಸರಿಯಾದ ಕ್ರಮವಲ್ಲ. ಸಾಮಾಜಿಕ ನ್ಯಾಯ ಎನ್ನುವ ಕುದುರೆಯನ್ನೇರಿ ಹೊರಟವರಿಗಂತೂ ಈ ತತ್ವ ಬಹಳ ಮುಖ್ಯವಾಗಬೇಕಾಗಿತ್ತು. ಹಾಗಾಗದೇ ಹೋದದ್ದು ಕೇವಲ ಮುಸ್ಲಿಂ ಸಮುದಾಯಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೇ ದೊಡ್ಡ ಆಪತ್ತನ್ನು ತರುವ ಸಾಧ್ಯತೆ ಇದೆ. ಈಗಲಾದರೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಈ ಸಮಸ್ಯೆಯನ್ನು ಎಚ್ಚರಿಕೆಯಿಂದ ಪರಿಶೀಲಿಸಿ ತನ್ನ ತಪ್ಪನ್ನು ಸರಿಪಡಿಸಿಕೊಳ್ಳಬೇಕಾಗಿದೆ.

ಹಿರಿಯ ಪತ್ರಕರ್ತ, ಸಾಹಿತಿ. ಕತೆ, ಕವಿತೆ, ಪ್ರವಾಸ ಕಥನ, ವಿಮರ್ಶೆ, ಕಾದಂಬರಿ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕ್ರಿಯಾಶೀಲ. ಬೆತ್ತಲೆಯ ಬೆಳಕನುಟ್ಟು, ಕೊಳ್ಳದ ಹಾದಿ, ಶಿಖರ ಸಾಲು, ಕಾಗೋಡು, ಕಾಡಿನ ದಾರಿ ಪ್ರಮುಖ ಕೃತಿಗಳು. ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿಯನ್ನು ಪಡೆದಿದ್ದಾರೆ. ಪುತಿನ ಕಾವ್ಯ ಪ್ರಶಸ್ತಿ, ಜಿಎಸ್‌ಎಸ್ ಕಾವ್ಯ ಪ್ರಶಸ್ತಿ, ಬೆಸಗರಹಳ್ಳಿ ರಾಮಣ್ಣ ಕಥಾ ಪ್ರಶಸ್ತಿ, ಕಿ.ರಂ. ಪುರಸ್ಕಾರ ಮುಂತಾದ ಗೌರವ ಪ್ರಶಸ್ತಿಗಳು ಸಂದಿವೆ.

ಭಾರತ 'ನರಕ' ಎಂದ ಟ್ರಂಪ್- ಮೋದಿ ಮೌನಕ್ಕೆ ಕಾರಣವೇನು?

ಭಾರತ ಮತ್ತು ಅಮೆರಿಕದ ಸಂಬಂಧ ಇತ್ತೀಚಿನ ವರ್ಷಗಳಲ್ಲಿ ಬಹಳ ಚರ್ಚೆಯಲ್ಲಿದೆ. ಅದರಲ್ಲೂ ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ನಡುವಿನ ''ಗೆಳೆತನ'' ಜಗತ್ತಿನಾದ್ಯಂತ ಸುದ್ದಿಯಾಗಿತ್ತು. ಹೌಡಿ ಮೋದಿ ಮತ್ತು ನಮಸ್ತೆ ಟ್ರಂಪ್ ಎಂಬ ಕಾರ್ಯಕ್ರಮಗಳನ್ನ ನಡೆಸಿದ್ದರು. ಆದರೆ, ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ, ಈ ಗೆಳೆತನ ಕೇವಲ ಒಂದು ಬದಿಯದ್ದೇ? ಅಥವಾ ಭಾರತದ ಸ್ವಾಭಿಮಾನವನ್ನು ಅಮೆರಿಕದ ಅಡಿಗಿಡಲಾಗಿದೆಯೇ? ಎಂಬ ಪ್ರಶ್ನೆ ಮೂಡುವುದು ಸಹಜ.

ಇತ್ತೀಚಿಗೆ ಡೊನಾಲ್ಡ್ ಟ್ರಂಪ್ ಭಾರತವನ್ನು ''ನರಕಕೂಪ '' (/) ಎಂದು ವಿಮರ್ಶಿಸಿದ್ದಾರೆ. ಈ ವಿವಾದಕ್ಕೆ ಕಾರಣವಾದದ್ದು ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ಮರುಹಂಚಿಕೊಂಡ ಅಮೆರಿಕದ ಪ್ರಮುಖ ಸಂಪ್ರದಾಯವಾದಿ ಲೇಖಕ ಮತ್ತು ರೇಡಿಯೋ ನಿರೂಪಕ ಮೈಕೆಲ್ ಸ್ಯಾವೇಜ್ ಅವರ ಪಾಡ್‌ಕಾಸ್ಟ್.

ಅದರಲ್ಲಿ ಭಾರತ ಸೇರಿದಂತೆ ಕೆಲವು ದೇಶಗಳನ್ನು ಅವಮಾನಕಾರಿ ರೀತಿಯಲ್ಲಿ ಉಲ್ಲೇಖಿಸಲಾಗಿತ್ತು. ಜೊತೆಗೆ ವಲಸೆ ನೀತಿ ಮತ್ತು ಜನ್ಮಸಿದ್ಧ ಪೌರತ್ವದ ಕುರಿತು ತೀವ್ರ ಟೀಕೆಗಳನ್ನು ಮಾಡಲಾಗಿತ್ತು. ಅಷ್ಟೇ ಅಲ್ಲ ''ಅಮೆರಿಕನ್ನರ ಉದ್ಯೋಗಗಳನ್ನು ಭಾರತೀಯರು ಮತ್ತು ಚೀನಿಯರು ಕಬಳಿಸುತ್ತಿದ್ದಾರೆ. ಐಟಿ ಕ್ಷೇತ್ರದಲ್ಲಿ ಕೆಲಸ ಮಾಡುವ ಭಾರತೀಯ ಮತ್ತು ಚೀನೀ ತಜ್ಞರನ್ನು '' '' ಎಂದು ಕರೆಯುವ ಮೂಲಕ, ಅವರು ಅಮೆರಿಕದ ತಂತ್ರಜ್ಞಾನ ವ್ಯವಸ್ಥೆಯನ್ನು ಲೂಟಿ ಮಾಡುತ್ತಿದ್ದಾರೆ'' ಎಂದು ಟ್ರಂಪ್ ದೂರಿದ್ದಾರೆ. ''ಭಾರತ ಮತ್ತು ಚೀನಾದಂತಹ ದೇಶಗಳಿಂದ ಜನರು ಪ್ರವಾಸಿ ವೀಸಾದಲ್ಲಿ ಅಮೆರಿಕಕ್ಕೆ ಬಂದು, ಇಲ್ಲಿ ಮಗುವಿಗೆ ಜನ್ಮ ನೀಡಿ, ಮಗುವಿಗೆ ಜನ್ಮಸಿದ್ಧವಾಗಿ ಸಿಗುವ ಅಮೆರಿಕದ ಪೌರತ್ವವನ್ನು ಪಡೆಯುತ್ತಿದ್ದಾರೆ. ಇದು ಅಮೆರಿಕದ ವ್ಯವಸ್ಥೆಯನ್ನು ಹಾಳುಮಾಡುತ್ತಿದೆ'' ಎಂದು ಅವರು ಟೀಕಿಸಿದ್ದಾರೆ.


ಒಂದು ದೇಶದ ಬಗ್ಗೆ, ವಿಶೇಷವಾಗಿ ವಿಶ್ವದ ದೊಡ್ಡ ಪ್ರಜಾಪ್ರಭುತ್ವದ ಬಗ್ಗೆ ಈ ರೀತಿಯ ಪದಗಳನ್ನು ಬಳಸುವುದು ಕೇವಲ ರಾಜಕೀಯ ಟೀಕೆ ಮಾತ್ರವಲ್ಲ, ಅದು ಆ ದೇಶದ ಗೌರವಕ್ಕೂ, ಜನರ ಆತ್ಮಗೌರವಕ್ಕೂ ಧಕ್ಕೆಯೇ. ಇನ್ನೂ ಟ್ರಂಪ್ ಹೇಳಿಕೆಗೆ ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ''ಈ ಕುರಿತು ಕೆಲ ವರದಿಗಳನ್ನ ಗಮನಿಸಿದ್ದೇವೆ. ಈ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದಿಲ್ಲ'' ಎಂದಷ್ಟೇ ಹೇಳಿದ್ದಾರೆ.

ಒಬ್ಬ ದೇಶದ ನಾಯಕ ತನ್ನ ದೇಶವನ್ನು ವಿಶ್ವಗುರು ಎಂದು ಕರೆದುಕೊಳ್ಳುವಾಗ, ಇನ್ನೊಂದು ದೇಶದ ನಾಯಕ ಅದೇ ದೇಶವನ್ನು ಹೀಯಾಳಿಸಿದರೆ ಅದಕ್ಕೆ ತಕ್ಕ ಉತ್ತರ ಕೊಡಬೇಕಾದುದು ರಾಜತಾಂತ್ರಿಕ ಧರ್ಮ. ಆದರೆ, ಇಲ್ಲಿ ಪ್ರಧಾನಿ ಮೋದಿ ಅವರಾಗಲಿ ಅಥವಾ ಅವರ ಸಂಪುಟದ ಪ್ರಭಾವಿ ಮಂತ್ರಿಗಳಾಗಲಿ ಟ್ರಂಪ್ ಹೇಳಿಕೆಯನ್ನು ಖಂಡಿಸುವ ಧೈರ್ಯ ತೋರಲಿಲ್ಲ. ''ಅಬ್ ಕಿ ಬಾರ್ ಟ್ರಂಪ್ ಸರ್ಕಾರ್'' ಎಂದು ಅಮೆರಿಕದ ಮಣ್ಣಿನಲ್ಲೇ ಘೋಷಣೆ ಕೂಗಿದ್ದ ಮೋದಿಯವರು, ಈಗ ಟ್ರಂಪ್ ಭಾರತದ ಗೌರವಕ್ಕೆ ಧಕ್ಕೆ ತಂದಾಗ ಏಕೆ ಮೌನವಾಗಿದ್ದಾರೆ?

ಇದೊಂದೇ ವಿಚಾರ ಅಂತಲ್ಲ, ಟ್ರಂಪ್ ಪದೇ ಪದೇ ಭಾರತವನ್ನು ''ಟ್ಯಾರಿಫ್ ಕಿಂಗ್'' (ಸುಂಕದ ರಾಜ) ಎಂದು ಕರೆಯುತ್ತಾ ಬಂದಿದ್ದಾರೆ. ಭಾರತವು ಅಮೆರಿಕದ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ಹಾಕುತ್ತಿದೆ ಎಂದು ಆರೋಪಿಸಿ, ಅದಕ್ಕೆ ಪ್ರತಿಫಲವಾಗಿ ಭಾರತದ ರಫ್ತುಗಳ ಮೇಲೆ ಟ್ರಂಪ್ ಸರ್ಕಾರ ಭಾರಿ ಸುಂಕ ಹೇರಿತು. ಇದರಿಂದ ಭಾರತದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ದೊಡ್ಡ ಹೊಡೆತ ಬಿದ್ದಿತು. ಈ ಮೂಲಕ ಟ್ರಂಪ್ ಭಾರತದ ಬೆನ್ನಿಗೆ ಚೂರಿ ಹಾಕಿದರೇ ಎಂಬ ಸಂಶಯವೂ ಭಾರತೀಯರಲ್ಲಿ ಮೂಡಿತ್ತು.

ಇಷ್ಟೆಲ್ಲಾ ಆದರೂ ಭಾರತ ಸರ್ಕಾರ ವ್ಯಾಪಾರ ಸಂಬಂಧ ಎಂಬ ನೆಪವೊಡ್ಡಿ ಸುಮ್ಮನಾಯಿತು. ಅಪ್ಪಿ ಮುದ್ದಾಡುವ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದವು ಆದರೆ ಭಾರತದ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಮೋದಿ ಸರ್ಕಾರ ಗಟ್ಟಿಯಾದ ನಿಲುವು ತಳೆಯಲಿಲ್ಲ.

ಅಷ್ಟೇ ಏಕೆ, ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧದ



ವಾತಾವರಣ ನಿರ್ಮಾಣವಾದಾಗ, ಅಂದರೆ ಪಹಲ್ಗಾಮ್ ದಾಳಿಯ ನಂತರ ಭಾರತ ಪಾಕಿಸ್ತಾನ ಮೇಲೆ ದಾಳಿ ಮಾಡಿದಾಗ, ಟ್ರಂಪ್ ಹಲವು ಬಾರಿ ''ನಾನೇ ಮಧ್ಯಪ್ರವೇಶಿಸಿ ಯುದ್ಧ ನಿಲ್ಲಿಸಿದೆ'' ಎಂಬ ಹೇಳಿಕೆ ನೀಡಿದ್ದರು. ಟ್ರಂಪ್ ತನ್ನನ್ನು ಮಧ್ಯಸ್ಥನಂತೆ ಪ್ರದರ್ಶಿಸಿಕೊಂಡಿದ್ದರು.

ಭಾರತದ ಸೈನಿಕರ ಶೌರ್ಯ ಮತ್ತು ಭಾರತದ ಸ್ವತಂತ್ರ ನಿರ್ಧಾರದಿಂದ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಲಾಯಿತು ಎಂಬುದು ಭಾರತೀಯರ ನಂಬಿಕೆಯಾಗಿತ್ತು. ಆದರೆ, ಟ್ರಂಪ್ ಈ ಕ್ರೆಡಿಟ್ ಅನ್ನು ತಾವೇ ತೆಗೆದುಕೊಳ್ಳುವಾಗ ಮೋದಿ ಸರ್ಕಾರ ಅಥವಾ ಅವರ ಭಕ್ತಗಣ ಇದನ್ನು ವಿರೋಧಿಸಲಿಲ್ಲ. ಪಾಕಿಸ್ತಾನದ ವಿಷಯದಲ್ಲಿ ಭಾರತಕ್ಕೆ ಬೇರೆಯವರ ಹಸ್ತಕ್ಷೇಪ ಇಷ್ಟವಿಲ್ಲ ಎಂಬುದು ಹಳೆಯ ನೀತಿ. ಆದರೆ ಟ್ರಂಪ್ ವಿಷಯದಲ್ಲಿ ಈ ನೀತಿಯನ್ನು ಗಾಳಿಗೆ ತೂರಲಾಗಿದೆಯೇ?

ಭಾರತದಲ್ಲಿ ಮೋದಿ ಬೆಂಬಲಿಗರು ಟ್ರಂಪ್ ಗೆಲ್ಲಬೇಕು ಎಂದು ಹರಕೆ ಹೊತ್ತಿದ್ದು, ಹೋಮಗಳನ್ನು ಮಾಡಿದ್ದು ಜಗತ್ತಿಗೇ ತಿಳಿದಿದೆ. ಒಬ್ಬ ವಿದೇಶಿ ನಾಯಕನಿಗಾಗಿ ಭಾರತದ ನಾಗರಿಕರು ಇಷ್ಟೊಂದು ಭಕ್ತಿ ತೋರಿಸಿದ್ದು ಮಾತ್ರ ಆಶ್ಚರ್ಯಕರ. ಆದರೆ ಅದೇ ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ಎಚ್-1ಬಿ (-1) ವೀಸಾ ನಿಯಮಗಳನ್ನು ಕಠಿಣಗೊಳಿಸಿ ಸಾವಿರಾರು ಭಾರತೀಯ ಉದ್ಯೋಗಿಗಳ ಕನಸನ್ನು ನುಚ್ಚುನೂರು ಮಾಡಿದರು.

ಅಮೆರಿಕದ ಹಿತಾಸಕ್ತಿಯೇ ಮುಖ್ಯ ಎಂದು ಟ್ರಂಪ್ ಅಮೆರಿಕ ಫಸ್ಟ್ ಎನ್ನುವಾಗ, ನಮ್ಮ ನಾಯಕರು ಭಾರತ್ ಫಸ್ಟ್ ಎನ್ನಲು ಯಾಕೆ ಹಿಂಜರಿಯುತ್ತಿದ್ದಾರೆ? ಗೆಳೆತನದ ಹೆಸರಿನಲ್ಲಿ ಭಾರತದ ಗೌರವವನ್ನು ಅಡ ಇಡುವುದು ಎಷ್ಟು ಸರಿ? ''ವಿಶ್ವಗುರು ಭಾರತ'' ಎಂದು ಘೋಷಿಸುವ ಸರ್ಕಾರ, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ತನ್ನ ಹಕ್ಕುಗಳನ್ನು ಕಾಪಾಡಿಕೊಳ್ಳಲು ವಿಫಲವಾಗುತ್ತಿದೆ ಎಂಬ ಟೀಕೆಗಳು ಕೇಳಿಬರುತ್ತಿವೆ.

ಕೋಟಿಗಟ್ಟಲೆ ಹಣ ಖರ್ಚು ಮಾಡಿ ಅಮೆರಿಕ ಮತ್ತು ಅಹಮದಾಬಾದ್‌ನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಲಕ್ಷಾಂತರ ಜನರು ಸೇರಿ ಜೈಕಾರ ಹಾಕಿದರು. ಆದರೆ ರಾಜತಾಂತ್ರಿಕವಾಗಿ ಭಾರತಕ್ಕೆ ಸಿಕ್ಕಿದ್ದೇನು? ಕಾಶ್ಮೀರ ವಿಷಯದಲ್ಲಿ ಟ್ರಂಪ್ ನೀಡಿದ ವಿವಾದಾತ್ಮಕ ಹೇಳಿಕೆಗಳು. ಪರಿಸರ ಒಪ್ಪಂದದಿಂದ ಹಿಂದೆ ಸರಿದು ಭಾರತದ ಮೇಲೆ ಗೂಬೆ ಕೂರಿಸಿದ್ದು. ಭಾರತದ ರಫ್ತುಗಳ ಮೇಲೆ ನಿರ್ಬಂಧ ಹೇರಿದ್ದು. ಇವಿಷ್ಟೂ ಟ್ರಂಪ್ ಭಾರತಕ್ಕೆ ನೀಡಿದ ಉಡುಗೊರೆಗಳು. ಇಷ್ಟೆಲ್ಲಾ ಅವಮಾನಗಳಾದರೂ ಮೋದಿ ಮತ್ತು ಅವರ ಗ್ಯಾಂಗ್ ಟ್ರಂಪ್ ವಿರುದ್ಧ ಒಂದೇ ಒಂದು ಪ್ರಶ್ನೆಯನ್ನೂ ಮಾಡದಿರುವುದು ಅವರ ''ರಾಷ್ಟ್ರಭಕ್ತಿ''ಯ ಬಗ್ಗೆಯೇ ಪ್ರಶ್ನೆಗಳನ್ನು ಎತ್ತುತ್ತದೆ.

ಇಲ್ಲಿ ಒಂದು ಪ್ರಮುಖ ಪ್ರಶ್ನೆ ಮೋದಿ ಮತ್ತು ಅವರ ಗ್ಯಾಂಗ್ ಟ್ರಂಪ್ ವಿರುದ್ಧ ಮಾತನಾಡಲು ಹಿಂಜರಿಯುತ್ತಿರುವುದೇಕೆ? ಟ್ರಂಪ್ ಅವರ ಈ ಹಿಂದಿನ ಹೇಳಿಕೆಗಳ ಮರ್ಮವನ್ನು ಕೆದಕಿದಾಗ ಹಲವು ಅನುಮಾನಗಳು ಹುಟ್ಟಿಕೊಳ್ಳುತ್ತವೆ. ನಾನು ನರೇಂದ್ರ ಮೋದಿಯವರ ರಾಜಕೀಯ ಜೀವನವನ್ನು ಅಂತ್ಯಗೊಳಿಸಲು ಬಯಸುವುದಿಲ್ಲ ಎಂದು ಟ್ರಂಪ್ ಹೇಳಿದ್ದರ ಹಿಂದೆ ಗುಪ್ತ ಬೆದರಿಕೆಯೋ ಅಥವಾ ಬ್ಲಾಕ್‌ಮೇಲ್ ತಂತ್ರವೋ ಅಡಗಿದೆಯೇ ಎಂಬ ಪ್ರಶ್ನೆ ಇಂದು ಬಲವಾಗಿ ಕೇಳಿಬರುತ್ತಿದೆ. ಯಾಕೆಂದರೆ, ಟ್ರಂಪ್ ಭಾರತವನ್ನು ಪದೇ ಪದೇ ಅವಮಾನಿಸಿದರೂ ಮೋದಿ ಸರ್ಕಾರ ಮೌನವಾಗಿರುವುದು ಸಾಮಾನ್ಯ ರಾಜತಾಂತ್ರಿಕ ನಡೆಯಲ್ಲ.

ಇದರ ಜೊತೆಗೆ, ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಚಲನ ಮೂಡಿಸಿದ್ದ ಎಪ್‌ಸ್ಟೀನ್ ಫೈಲ್ಸ್‌ನಲ್ಲಿ ಮೋದಿಯವರ ಹೆಸರಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು. ಹಾಗಾದರೆ, ಈ ಕರಾಳ ಕಡತಗಳಲ್ಲಿರುವ ಮಾಹಿತಿಗಳನ್ನು ಇಟ್ಟುಕೊಂಡು ಟ್ರಂಪ್ ಭಾರತದ ಪ್ರಧಾನಿಯನ್ನು ನಿಯಂತ್ರಿಸುತ್ತಿದ್ದಾರೆಯೇ? ಮೋದಿಯವರ ಈ ನಿಗೂಢ ಮೌನಕ್ಕೆ ಟ್ರಂಪ್ ಬಳಿ ಇರಬಹುದಾದ ಯಾವುದಾದರೂ ರಹಸ್ಯ ದಾಖಲೆಗಳ ಭಯವೇ ಕಾರಣವೇ? ವೈಯಕ್ತಿಕ ಇಮೇಜ್ ಉಳಿಸಿಕೊಳ್ಳುವ ಆತುರದಲ್ಲಿ ದೇಶದ ಸ್ವಾಭಿಮಾನವನ್ನು ಬಲಿ ಕೊಡಲಾಗುತ್ತಿದೆಯೇ ಎಂಬ ಅನುಮಾನ ಈಗ ಭಾರತೀಯರಲ್ಲಿ ಕಾಡತೊಡಗಿದೆ.

ದೇಶದ ನಾಯಕರಿಗೆ ದೇಶದ ಗೌರವಕ್ಕಿಂತ ವೈಯಕ್ತಿಕ ಗೆಳೆತನ ಅಂತ ಕರೆಯುವುದು ಸೂಕ್ತವೋ ಅಥವಾ ಭಯ ಅಂತ ಹೇಳುವುದು ಸೂಕ್ತವೋ ಗೊತ್ತಿಲ್ಲ. ಆದರೆ ಆ ಗೆಳೆತನ ಅಥವಾ ಭಯ ಅತೀಯಾದಾಗಲೇ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವಿಶ್ವಗುರು ಎಂದು ಜಗತ್ತಿಗೆ ಸಾರುವ ಮೊದಲು, ನಮ್ಮನ್ನು ಹೀಯಾಳಿಸುವವರಿಗೆ ''ನಮ್ಮ ದೇಶದ ಬಗ್ಗೆ ಹೀಗೆ ಮಾತನಾಡಬೇಡಿ'' ಎಂದು ಹೇಳುವ ಎದೆಗಾರಿಕೆ ಬೇಕು. ಟ್ರಂಪ್ ಭಾರತವನ್ನು ಅವಮಾನಿಸಿದಾಗ ಗಪ್-ಚುಪ್ ಆಗಿರುವ ಮೋದಿ ಸರ್ಕಾರ, ಭಾರತೀಯರ ಆತ್ಮಗೌರವವನ್ನು ಎಲ್ಲಿ ಅಡವಿಟ್ಟಿದೆ ಎಂಬುದು ಸಾಮಾನ್ಯ ಜನರ ಪ್ರಶ್ನೆಯಾಗಿದೆ. ಅಮೆರಿಕದ ಅಧ್ಯಕ್ಷರು ಯಾರೇ ಆಗಿರಲಿ, ಅವರು ತಮ್ಮ ದೇಶದ ಹಿತವನ್ನೇ ನೋಡುತ್ತಾರೆ. ಆದರೆ ನಮ್ಮವರು ಮಾತ್ರ ''ಗೆಳೆಯ ಬಂದ, ಗೆಳೆಯ ಹೋದ'' ಎಂದು ಸಂಭ್ರಮಿಸುವುದರಲ್ಲೇ ಮಗ್ನರಾಗಿದ್ದಾರೆ. ಇನ್ನಾದರೂ ಭಾರತದ ವಿದೇಶಾಂಗ ನೀತಿ ಬಾಯಿ ಮುಚ್ಚಿ ಕೂರುವುದಕ್ಕಿಂತ ಹೆಚ್ಚಾಗಿ ದೇಶದ ಗೌರವ ಎತ್ತಿ ಹಿಡಿಯುವುದರ ಕಡೆಗೆ ಗಮನ ಹರಿಸಲಿ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR